# <u>ಕರ್ನಾಟಕ ವಿಧಾನ ಪರಿಷತ್ತು</u>

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 611 |
| 2 | ಸದಸ್ಯರ ಹೆಸರು | : | ಶ್ರೀ ಕೆ.ಎಸ್.ನವೀನ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 20-08-2026 |
| 4 | ಉತ್ತರಿಸುವವರು | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ನಗರ ಪಾಲಿಕೆಗಳ ವ್ಯಾಪ್ತಿಯ ನಿವೇಶನದಾರರು ಮನೆ ನಿರ್ಮಾಣ ಸಂದರ್ಭದಲ್ಲಿ ಸೆಟ್‌ಬ್ಯಾಕ್ ಬಿಡುವ ಮಾನದಂಡವನ್ನು ಉಲ್ಲಂಘಿಸಿ ನಿವೇಶನದ ಪೂರ್ಣ ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮಗಳೇನು; | ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024 ಜಾರಿಗೆ ಬಂದ ನಂತರ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಬೆಂಗಳೂರು ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಮತ್ತು ಕೇಂದ್ರ ಎಂಬ ಐದು ನಗರ ಪಾಲಿಕೆಗಳು 02.09.2025 ರಿಂದ ಕಾರ್ಯನಿರ್ವಹಿಸುತ್ತಿವೆ.<br><br>ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ಹಾಗೂ ಮಂಜೂರಾದ ಕಟ್ಟಡ ನಕ್ಷೆಯಿಂದ ವ್ಯತಿರಿಕ್ತವಾಗಿ ಕೈಗೊಂಡ ನಿರ್ಮಾಣಗಳನ್ನು ನಿಯಂತ್ರಿಸಲು ಹಲವಾರು ಕಾನೂನುಬದ್ಧ ಕ್ರಮಗಳನ್ನು ಜಾರಿಗೆ ತರಲಾಗಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತವೆ.<br><br>(1) ಕಾಯ್ದೆಯ ಕಲಂ 85(1) ಮತ್ತು 87 ರಲ್ಲಿ ಆಯುಕ್ತರಿಗಿರುವ ಅಧಿಕಾರವನ್ನು ಅಧೀನ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲು ಅವಕಾಶವಿರುತ್ತದೆ. ಅದರಂತೆ ಕಲಂ 243 (3) (c), (d), (e) ಮತ್ತು (f), ಕಲಂ 243(2), 243(4), 244(2), 311 & 312(1)(b) ರಡಿಯಲ್ಲಿ ಕಟ್ಟಡ ನಿರ್ಮಾಣದಲ್ಲಿ ಉಲ್ಲಂಘನೆಗಳನ್ನು ತಡೆಯಲು ಮತ್ತು ಕಟ್ಟಡಗಳನ್ನು ತೆರವುಗೊಳಿಸುವಲ್ಲಿ ವಿವಿಧ ಅಧಿಕಾರಿಗಳಿಗೆ ನಿರ್ವಹಿಸಬೇಕಾದ ಕಾರ್ಯ ವಿಧಾನಗಳ ಬಗ್ಗೆ ಮಾರ್ಗಸೂಚಿಗಳನ್ನು ರೂಪಿಸಿ ಸಂಬಂಧಪಟ್ಟ ನಗರ ಪಾಲಿಕೆಗಳ ಆಯುಕ್ತರುಗಳು ಕಚೇರಿ ಆದೇಶ ಹೊರಡಿಸಿರುತ್ತಾರೆ. ಮಾದರಿಯಾಗಿ ಬೆಂಗಳೂರು ಪೂರ್ವ ನಗರ ಪಾಲಿಕೆಯ ಕಛೇರಿ ಆದೇಶದ ಪ್ರತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>(2) ಅನಧಿಕೃತವಾಗಿ ಅಥವಾ ನಕ್ಷೆ ಮಂಜೂರಾತಿ ಉಲ್ಲಂಘಿಸಿ ಕೈಗೊಳ್ಳುವ ನಿರ್ಮಾಣಗಳನ್ನು ತಡೆಯುವ ಕುರಿತು ಅನುಸರಿಸಬೇಕಾದ ಕಾರ್ಯವಿಧಾನದ ಮಾರ್ಗಸೂಚಿಗಳನ್ನು ನಿಗಧಿಪಡಿಸಿ ಸಂಬಂಧಪಟ್ಟ ನಗರ ಪಾಲಿಕೆಗಳ ಆಯುಕ್ತರು ಆದೇಶ ಹೊರಡಿಸಿರುತ್ತಾರೆ. ಮಾದರಿಯಾಗಿ ಬೆಂಗಳೂರು ಪೂರ್ವ ನಗರ ಪಾಲಿಕೆಯ ಕಛೇರಿ ಆದೇಶದ ಪ್ರತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |

. . . 2.

(3) ಅನಧಿಕೃತ ನಿರ್ಮಾಣಗಳು ಮತ್ತು ಮಂಜೂರಾತಿ ನಕ್ಷೆಗಳನ್ನು ಉಲ್ಲಂಘಿಸಿ ನಿರ್ಮಿಸುವ ನಿರ್ಮಾಣಗಳನ್ನು ತಡೆಯುವ ಕುರಿತು ಕಾಯ್ದೆಯಡಿಯಲ್ಲಿ ಕ್ರಮಜರುಗಿಸಲು ಅವಶ್ಯವಿರುವ ಮಾದರಿ ನೋಟೀಸ್‌ಗಳನ್ನು ನಿರ್ದಿಷ್ಟಪಡಿಸಿ ಅದರಂತೆ ಕ್ರಮಕೈಗೊಳ್ಳಲು ನಗರ ಪಾಲಿಕೆಗಳಿಂದ ಆದೇಶ ಹೊರಡಿಸಲಾಗಿದೆ. ಮಾದರಿಯಾಗಿ ಬೆಂಗಳೂರು ಪೂರ್ವ ನಗರ ಪಾಲಿಕೆಯ ಆದೇಶದ ಪ್ರತಿಯನ್ನು **ಅನುಬಂಧ-3** ರಲ್ಲಿ ಒದಗಿಸಿದೆ.

(4) ಕಾಯ್ದೆಯ ಕಲಂ 244(2) ರಡಿಯಲ್ಲಿ ಅನಧಿಕೃತ/ ಉಲ್ಲಂಘಿತ ಕಟ್ಟಡ ಅಥವಾ ಅದರ ಭಾಗವನ್ನು ತೆರವುಗೊಳಿಸಲು ಕಾರ್ಯಪಾಲಕ ಅಭಿಯಂತರರಿಗೆ ಇಪ್ಪತ್ತೈದು ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಈ ಅನುದಾನವನ್ನು ಒಂದು ಆವರ್ತ ನಿಧಿಯಾಗಿ (Revolving Fund) ಒದಗಿಸಿ ನಗರ ಪಾಲಿಕೆಗಳಿಂದ ಆದೇಶ ಹೊರಡಿಸಲಾಗಿದೆ. ಮಾದರಿಯಾಗಿ ಬೆಂಗಳೂರು ಪೂರ್ವ ನಗರ ಪಾಲಿಕೆಯ ಆದೇಶದ ಪ್ರತಿಯನ್ನು **ಅನುಬಂಧ-4** ರಲ್ಲಿ ಒದಗಿಸಿದೆ.

(5) ಅನಧಿಕೃತ/ಉಲ್ಲಂಘಿತ ಕಟ್ಟಡ ಅಥವಾ ಅದರ ಭಾಗವನ್ನು ತೆರವುಗೊಳಿಸುವ ಸಂಬಂಧ ಪ್ರಕರಣಗಳ ಮೇಲ್ವಿಚಾರಣೆ ಮತ್ತು ಸಮನ್ವಯತೆಗಾಗಿ ನಗರ ಪಾಲಿಕೆಗಳ ಆಯುಕ್ತರುಗಳ ಅಧ್ಯಕ್ಷತೆಯಲ್ಲಿ ನಗರ ಪಾಲಿಕೆಯ ವಿವಿಧ ಅಧಿಕಾರಿ ಗಳನ್ನೊಳಗೊಂಡ ಮೇಲ್ವಿಚಾರಣೆ ಮತ್ತು ಸಮನ್ವಯ ಸಮಿತಿಯನ್ನು ರಚಿಸಲಾಗಿದೆ. ಮುಂದುವರೆದು, ಉಲ್ಲಂಘನೆಗಳನ್ನು ತೆರವುಗೊಳಿಸುವ ಕಾರ್ಯವು ಸಮರ್ಪಕವಾಗಿ ನಿರ್ವಹಿಸಲು ಸಹಕಾರಿಯಾಗುವಂತೆ ವಲಯ ಜಂಟಿ ಆಯುಕ್ತರ ನೇತೃತ್ವದಲ್ಲಿ ಅಭಿಯಂತರರು/ ಅಧಿಕಾರಿಗಳು ಮತ್ತು ಬಿಎಂಟಿಎಫ್ ಪೊಲೀಸ್ ಅಧಿಕಾರಿಗಳನ್ನೊಳಗೊಂಡ ಅನುಷ್ಠಾನ ಕಾರ್ಯಪಡೆ (Enforcement Task Force) ಅನ್ನು ರಚಿಸಲಾಗಿರುತ್ತದೆ. ಸದರಿ ಆದೇಶವನ್ನು **ಅನುಬಂಧ-5** ರಲ್ಲಿ ಒದಗಿಸಿದೆ.

ಒಟ್ಟಾರೆಯಾಗಿ, ಅನುಮೋದಿತ ನಕ್ಷೆ/ಕಟ್ಟಡ ಪರವಾನಗಿಯ ಉಲ್ಲಂಘನೆಗಳಿಗೆ ಸಂಬಂಧಿಸಿದ ದೂರುಗಳ ಮೇಲೆ ಕ್ರಮ ಕೈಗೊಳ್ಳುವಲ್ಲಿ ವಿಳಂಬವನ್ನು ತಪ್ಪಿಸಿ, ಪ್ರತಿ ಹಂತಕ್ಕೂ ಸಂಬಂಧಪಟ್ಟ ಅಧಿಕಾರಿಯ ಜವಾಬ್ದಾರಿ ಮತ್ತು ನಿರ್ದಿಷ್ಟ ಕಾಲಮಿತಿಯನ್ನು ನಿಗದಿಪಡಿಸಿ, ದೂರು ಸ್ವೀಕೃತಿಯಿಂದ ತೆರವು ಹಾಗೂ ತೆರವು ವೆಚ್ಚ ವಸೂಲಾತಿ ಪ್ರಸ್ತಾವನೆವರೆಗೆ ಸಂಪೂರ್ಣ ಪ್ರಕ್ರಿಯೆಯನ್ನು 130 ದಿನಗಳೊಳಗೆ ಪೂರ್ಣಗೊಳಿಸಲು ನಗರ ಪಾಲಿಕೆಗಳಿಂದ ಆದೇಶಿಸಲಾಗಿದೆ.

| | | |
|---|---|---|
| ಆ) | ಅಕ್ರಮ ನಿರ್ಮಾಣದ ಕಟ್ಟಡಗಳು ಇ-ಖಾತಾ ಆಗಲು ಅನುಸರಿಸುತ್ತಿರುವ ವಿಧಾನಗಳು ಯಾವುವು; ಅಕ್ರಮ ಇ-ಖಾತಾಗೆ ಸಹಕರಿಸಿದ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು; | ಅಕ್ರಮವಾಗಿ ನಿರ್ಮಿಸಲಾದ ಕಟ್ಟಡಗಳಿಗೆ ಇ-ಖಾತೆ ನೀಡುವ ಯಾವುದೇ ಪ್ರತ್ಯೇಕ ವಿಧಾನ ಅಥವಾ ಅವಕಾಶ ಇರುವುದಿಲ್ಲ. ಕಟ್ಟಡವು ಕಾನೂನುಬಾಹಿರವಾಗಿ ನಿರ್ಮಾಣಗೊಂಡಿದ್ದಲ್ಲಿ, ಸಂಬಂಧಿತ ಕಟ್ಟಡ ನಿರ್ಮಾಣ ಉಲ್ಲಂಘನೆಗಳ ವಿರುದ್ಧ ನಗರ ಪಾಲಿಕೆಯ ಅಭಿಯಂತ್ರಣ ವಿಭಾಗವು ಅನ್ವಯಿಸುವ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳುತ್ತದೆ.<br><br>ಖಾತೆ (ಇ-ಖಾತೆ) ಎಂಬುದು ಮೂಲತಃ ಭೂಮಿ/ನಿವೇಶನದ ಕಂದಾಯ ದಾಖಲೆಯಾಗಿದ್ದು, ಅದು ಕಟ್ಟಡ ನಿರ್ಮಾಣದ ಕಾನೂನುಬದ್ಧತೆಯನ್ನು ಪ್ರಮಾಣೀಕರಿಸುವ ದಾಖಲೆ ಅಲ್ಲ. ಇ-ಖಾತೆ ನೀಡುವ ಸಂದರ್ಭದಲ್ಲಿ ಸಂಬಂಧಿತ ಕಾಯ್ದೆ, ನಿಯಮಗಳು ಹಾಗೂ ಸರ್ಕಾರದ ಆದೇಶಗಳನ್ವಯ ಅರ್ಜಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ.<br><br>ಒಂದು ವೇಳೆ ಯಾವುದೇ ಅಧಿಕಾರಿ ನಿಯಮಗಳಿಗೆ ವಿರುದ್ಧವಾಗಿ ಅಥವಾ ಅನಧಿಕೃತವಾಗಿ ಇ-ಖಾತೆಯನ್ನು ಮಂಜೂರು ಮಾಡಿರುವುದು ಕಂಡುಬಂದಲ್ಲಿ, ಸಂಬಂಧಿತ ಅಧಿಕಾರಿಯ ವಿರುದ್ಧ ಅನ್ವಯವಾಗುವ ಸೇವಾ ನಿಯಮಗಳ ಪ್ರಕಾರ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ. |
| ಇ) | ಫುಟಪಾತ್ ಒತ್ತುವರಿ ಹೆಸರಿನಲ್ಲಿ ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಿ, ಅಕ್ರಮ ಕಟ್ಟಡ ನಿರ್ಮಾಣದಾತರಿಗೆ ಮಣೆ ಹಾಕುತ್ತಿರುವುದು ಸರ್ಕಾರ ದಿವಾಳಿಯಾಗಿರುವ ಸಂಕೇತವೇ? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಪಾದಚಾರಿ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಪಾದಚಾರಿಗಳು ಪಾದಚಾರಿ ಮಾರ್ಗಗಳ ಮೇಲೆ ಸುರಕ್ಷಿತವಾಗಿ ಸಂಚರಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಕ್ರಮಕೈಗೊಳ್ಳಲಾಗುತ್ತಿದೆ. ಸದರಿ ಒತ್ತುವರಿ ತೆರವುಗೊಳಿಸುವ ಹೆಸರಿನಲ್ಲಿ ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಿ, ಅಕ್ರಮ ಕಟ್ಟಡ ನಿರ್ಮಾಣದವರಿಗೆ ಮಣೆ ಹಾಕುತ್ತಿರುವಂತಹ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. |

**ನಅಇ 318 ಎಂಎಸ್‌ಯು 2026 (ಇ)**

**(ಕೃಷ್ಣ ಬೈರೇಗೌಡ)**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು

ಅನುಬಂಧ-1

ಗ್ರೇಟರ್ ಬೆಂಗಳೂರು ಪ್ರಾಧಿಕಾರ

# ಬೆಂಗಳೂರು ಪೂರ್ವ ನಗರ ಪಾಲಿಕೆ

ಆರ್.ಹೆಚ್.ಬಿ ಕಾಲೋನಿ, ಐಟಿಪಿಎಲ್ ಮುಖ್ಯ ರಸ್ತೆ, ಮಹದೇವಪುರ, ಬೆಂಗಳೂರು-560048

ಸಂಖ್ಯೆ: ಬೆಪೂನಪಾ/ಆ/ಪಿಆರ್/158/25-26 ದಿನಾಂಕ:21.11.2025

## ಅಧಿಕಾರ ಪ್ರತ್ಯಾಯೋಜನಾ ಆದೇಶ

(ಜಿ.ಬಿ.ಜಿ ಕಾಯ್ದೆ-2024 ರ ಕಲಂ 85(1) & 87 ರಡಿಯಲ್ಲಿ)

ವಿಷಯ: ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಕ್ಷೆ ಮಂಜೂರಾತಿ ಉಲ್ಲಂಘಿಸಿ/ಅನಧಿಕೃತವಾಗಿ ನಕ್ಷೆ ಮಂಜೂರಾತಿ ಪಡೆಯದೇ/ನಿರ್ಮಿಸುತ್ತಿರುವ ಕಟ್ಟಡಗಳನ್ನು ತೆರವುಗೊಳಿಸಲು ಅಧಿಕಾರ ಪ್ರತ್ಯಾಯೋಜನೆ ಮಾಡುವ ಬಗ್ಗೆ.

ಉಲ್ಲೇಖ:1) ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ (ಜಿ.ಬಿ.ಜಿ ಕಾಯ್ದೆ) 2024 ರ ಕಲಂ 85(1) ಮತ್ತು 87 ರ ಅವಕಾಶ

2) ನಗರ ಪಾಲಿಕೆ ಕಛೇರಿ ಆದೇಶ ಸಂಖ್ಯೆ: ಬೆಪೂನಪಾ/ಆ/ಪಿಆರ್/159/25-26 ದಿನಾಂಕ:21.11.2025

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನರಗ ಪಾಲಿಕೆ ವ್ಯಾಪ್ತಿಯಲ್ಲಿ ಮಂಜೂರಾತಿ ಪಡೆದ ಕಟ್ಟಡ ನಕ್ಷೆಗಳ ಉಲ್ಲಂಘನೆ, ಅನಧಿಕೃತ ಕಟ್ಟಡಗಳ ನಿರ್ಮಾಣಗಳ ತಡೆಗೆ ಸಂಬಂಧಪಟ್ಟಂತೆ ಕಾರ್ಯ ವಿಧಾನಗಳನ್ನು ವಿವರಿಸಿ ವಿವಿಧ ರೀತಿಯ ಉಲ್ಲಂಘನೆಗಳನ್ನು ತಡೆಯುವಲ್ಲಿ ಮತ್ತು ಕಟ್ಟಡಗಳನ್ನು ತೆರವುಗೊಳಿಸುವಲ್ಲಿ ಮಾರ್ಗಸೂಚಿಗಳನ್ನು ರೂಪಿಸಿ ಅನಧಿಕೃತ/ಉಲ್ಲಂಘನೆ ತಡೆಯಲು ಕಾರ್ಯ ವಿಧಾನವನ್ನು ವಿವರಿಸಿ ಉಲ್ಲೇಖ (2) ರಲ್ಲಿ ಕಛೇರಿ ಆದೇಶವನ್ನು ಹೊರಡಿಸಲಾಗಿದೆ.

ಮುಂದುವರೆದು, ಸದರಿ ಆದೇಶವನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತ / ಉಲ್ಲಂಘಿತ ಕಟ್ಟಡಗಳ ನಿರ್ಮಾಣಗಳ ತಡೆಗೆ ಸಂಬಂಧಪಟ್ಟಂತೆ ವಿವಿಧ ಅಧಿಕಾರಿಗಳಿಗೆ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ 2024 ರ ಕಲಂ 85(1) & 87 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಾಯ್ದೆಯ ಕಲಂ 243 (3) (c) (d) (e) ಮತ್ತು (f), 243(2) ಮತ್ತು (4) ಮತ್ತು ಕಲಂ 244(2) & 311 ಮತ್ತು 312(1)(b) ರಡಿಯಲ್ಲಿ ಕಾರ್ಯವನ್ನು ನಿರ್ವಹಿಸಲು ಹಾಗೂ ವಿವಿಧ ರೀತಿಯ ಉಲ್ಲಂಘನೆಗಳನ್ನು ತಡೆಯುವಲ್ಲಿ ಮತ್ತು ಕಟ್ಟಡಗಳನ್ನು ತೆರವುಗೊಳಿಸುವಲ್ಲಿ ವಿವಿಧ ಅಧಿಕಾರಿಗಳಿಗೆ ಅನಧಿಕೃತ/ ಉಲ್ಲಂಘನೆ ತಡೆಯಲು ನಿರ್ವಹಿಸಬೇಕಾದ ಕಾರ್ಯ ವಿಧಾನವನ್ನು ವಿವರಿಸಿ ಉಲ್ಲೇಖ (2) ರ ಕಛೇರಿ ಆದೇಶ ಹೊರಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 ರ ಕಲಂ 85(1) ಮತ್ತು 87 ರಡಿ ಪ್ರದತ್ತವಾದ ಅಧಿಕಾರದಂತೆ ವಿವಿಧ ರೀತಿಯ ಕಟ್ಟಡ ನಿರ್ಮಾಣ ಉಲ್ಲಂಘನೆಗಳನ್ನು ತಡೆಯುವಲ್ಲಿ ಮತ್ತು ಕಟ್ಟಡಗಳನ್ನು ತೆರವುಗೊಳಿಸುವಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿರುವ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯ ವಿವಿಧ ಕಲಂಗಳನ್ನು ವಿವಿಧ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ ನೀಡಿ ಈ ಅಧಿಕಾರ ಪ್ರತ್ಯಾಯೋಜನೆ ಆದೇಶದಂತೆ ಕ್ರಮ ವಹಿಸಲು ಆದೇಶ ಹೊರಡಿಸಲಾಗಿದೆ.

| ಕ್ರ.ಸ | ಕಾಯ್ದೆಯ ಅವಕಾಶ | ವಿವರಣೆ | ಪ್ರತ್ಯಾಯೋಜಿಸಲಾದ ಅಧಿಕಾರಿ |
|---|---|---|---|
| 1 | 243 (2) | ಅನಧಿಕೃತ/ಉಲ್ಲಂಘನೆಗಳನ್ನು ಪರಿಶೀಲಿಸುವುದು | ನಗರ ಪಾಲಿಕೆಗಳಲ್ಲಿ ಅನಧಿಕೃತ/ ಉಲ್ಲಂಘನೆಗಳು ಕಂಡುಬಂದಲ್ಲಿ ಸ್ಥಳಕ್ಕೆ ಪ್ರವೇಶಿಸಲು ಹಾಗೂ ಉಲ್ಲಂಘನೆಗಳನ್ನು ಪರಿಶೀಲಿಸಲು ಸಂಬಂಧಪಟ್ಟ ಜಂಟಿ ಆಯುಕ್ತರು, ಕಾರ್ಯಪಾಲಕ ಅಭಿಯಂತರರುಗಳು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ/ ಕಿರಿಯ ಅಭಿಯಂತರರು, ನಗರ ಯೋಜನೆ ವಿಭಾಗದ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು, ನಗರ ಯೋಜಕರು/ ಸಹಾಯಕ ಅಭಿಯಂತರರುಗಳಿಗೆ ಪ್ರತ್ಯಾಯೋಜಿಸಲಾಗಿದೆ. |
| 2 | 243 (3) (c) (d) (e) & (f) | ಅನಧಿಕೃತ/ಉಲ್ಲಂಘನೆಗಳಿಗೆ ನೋಟಿಸ್ ಜಾರಿ ಮಾಡುವುದು. | ನಗರ ಪಾಲಿಕೆಯ ಸಂಬಂಧಪಟ್ಟ ಜಂಟಿ ಆಯುಕ್ತರುಗಳು ಅನಧಿಕೃತ /ಉಲ್ಲಂಘಿತ ಕಟ್ಟಡಗಳಿಗೆ ತಾತ್ಕಾಲಿಕ ಆದೇಶ ಹಾಗೂ ನೋಟಿಸ್/ ಸ್ಥಿರಿಕರಣ ಆದೇಶ ನೀಡುವುದು. |
| 3 | 243 (4) | ಅನಧಿಕೃತ/ಉಲ್ಲಂಘನೆಗಳನ್ನು ಸೀಲ್ ಮಾಡುವುದು. | ನಗರ ಪಾಲಿಕೆಯ ಸಂಬಂಧಪಟ್ಟ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು/ ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಮತ್ತು ಸಹಾಯಕ ಕಂದಾಯಾಧಿಕಾರಿ ಅನಧಿಕೃತ /ಉಲ್ಲಂಘಿತ ಕಟ್ಟಡಗಳು/ ಭಾಗಗಳನ್ನು ಸಿಲ್ ಮಾಡುವುದು |
| 4 | 244 (2) | ಅನಧಿಕೃತ/ಉಲ್ಲಂಘನೆಗಳನ್ನು ತೆರವುಗೊಳಿಸುವುದು. | ಅನಧಿಕೃತ/ಉಲ್ಲಂಘಿತ ಕಟ್ಟಡಗಳು/ಭಾಗಗಳನ್ನು ತೆರವುಗೊಳಿಸಲು ನಗರ ಪಾಲಿಕೆಯಲ್ಲಿ ಪ್ರತ್ಯೇಕವಾಗಿ ಅನುಷ್ಠಾನ ಕಾರ್ಯಪಡೆಗೆ ಅಧಿಕಾರ ಪ್ರತ್ಯೋಜಿಸಲಾಗಿದೆ. |
| 5 | 311,312 (1) (b) | ದಾಖಲಾತಿ ಹಾಜರು ಪಡಿಸಲು/ಸ್ಥಳಕ್ಕೆ ಪ್ರವೇಶಿಸಲು | ಅನಧಿಕೃತ /ಉಲ್ಲಂಘನೆಗಳು ಕಂಡು ಬಂದಲ್ಲಿ ಸ್ಥಳಕ್ಕೆ ಪ್ರವೇಶಿಸಲು ಹಾಗೂ ಉಲ್ಲಂಘನೆಗಳನ್ನು ಪರಿಶೀಲಿಸಲು ಸಂಬಂಧಪಟ್ಟ ಜಂಟಿ ಆಯುಕ್ತರು, ಕಾರ್ಯಪಾಲಕ ಅಭಿಯಂತರರುಗಳು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ/ ಕಿರಿಯ ಅಭಿಯಂತರರು, ನಗರ ಯೋಜನೆ ವಿಭಾಗದ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು, ನಗರ ಯೋಜಕರು/ ಸಹಾಯಕ ಅಭಿಯಂತರರುಗಳಿಗೆ ಪ್ರತ್ಯಾಯೋಜಿಸಲಾಗಿದೆ. |

ಮೇಲ್ಕಂಡ ಅಧಿಕಾರ ಪ್ರತ್ಯಾಯೋಜನೆಯಂತೆ ಸಂಬಂಧಪಟ್ಟ ನಗರ ಪಾಲಿಕೆಗಳ ಅಧಿಕಾರಿ/ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸಲು ಆದೇಶಿಸಿದೆ.

ಆಯುಕ್ತರು
ಬೆಂಗಳೂರು ಪೂರ್ವ ನಗರ ಪಾಲಿಕೆ

ಪ್ರತಿಯನ್ನು:

1) ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3) ವಿಶೇಷ ಆಯುಕ್ತರು (ಯೋಜನೆ)/(ಆಡಳಿತ)/(ಕಂದಾಯ) ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಮಾಹಿತಿಗಾಗಿ ಸಲ್ಲಿಸಿದೆ.

4) ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಮಾಹಿತಿಗಾಗಿ.
5) ಅಪರ ಮುಖ್ಯ ನಗರ ಯೋಜಕರು, ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಜಂಟಿ ಆಯುಕ್ತರುಗಳು, ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ಬೆಂಗಳೂರು ಪೂರ್ವ ನಗರ ಪಾಲಿಕೆ ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಮುಖ್ಯ ಅಭಿಯಂತರರು ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಸೂಕ್ತ ಕ್ರಮಕ್ಕಾಗಿ.
8) ಜಂಟಿ ನಿರ್ದೇಶಕರು-ನಗರ ಯೋಜನೆ ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
9) ಎಲ್ಲಾ ವಿಭಾಗಗಳ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ.
10) ಉಪ ಆಯುಕ್ತರು (ಆಡಳಿತ), ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ.
11) ಉಪ ನಿರ್ದೇಶಕರು, ನಗರ ಯೋಜನೆ ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಸೂಕ್ತ ಕ್ರಮಕ್ಕಾಗಿ.
12) ಎಲ್ಲಾ ಉಪ-ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ ಸಂಬಂಧಪಟ್ಟ ವಾರ್ಡ್‌ನ ಅಭಿಯಂತರರು ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಅಗತ್ಯ ನಿರ್ದೇಶನ ನೀಡುವಂತೆ ಸೂಚಿಸಿದೆ.
13) ಎಲ್ಲಾ ಕಂದಾಯಾಧಿಕಾರಿಗಳ ಹಾಗೂ ಸಹಾಯಕ ಕಂದಾಯಾಧಿಕಾರಿಗಳು ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
14) ಕಛೇರಿ ಪ್ರತಿ.

ಅನುಬಂಧ-2

ಗ್ರೇಟರ್ ಬೆಂಗಳೂರು ಪ್ರಾಧಿಕಾರ

# ಬೆಂಗಳೂರು ಪೂರ್ವ ನಗರ ಪಾಲಿಕೆ

ಆರ್.ಹೆಚ್.ಬಿ ಕಾಲೋನಿ, ಐಟಿಪಿಎಲ್ ಮುಖ್ಯ ರಸ್ತೆ, ಮಹದೇವಪುರ, ಬೆಂಗಳೂರು-560048

ಸಂಖ್ಯೆ: ಬೆಪೂನಪಾ/ಆ/ಪಿಆರ್/159/25-26 ದಿನಾಂಕ:21.11.2025

## ಕಛೇರಿ ಆದೇಶ

ವಿಷಯ: ನಗರ ಪಾಲಿಕೆಯಿಂದ ಮಂಜೂರಾದ ನಕ್ಷೆಗಳನ್ನು ಉಲ್ಲಂಘಿಸಿ ನಿರ್ಮಿಸುವ ಕಟ್ಟಡಗಳು ಮತ್ತು ಅನಧಿಕೃತ ಕಟ್ಟಡ ನಿರ್ಮಾಣಗಳನ್ನು ತಡೆಯುವ ಕುರಿತು ಅನುಸರಿಸಬೇಕಾದ ಕಾರ್ಯವಿಧಾನದ ಮಾರ್ಗಸೂಚಿಗಳು.

ಉಲ್ಲೇಖ:1. ಘನ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 295/2022 C/W ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆ: 162/2022, ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 328/2022 ಪ್ರಕರಣಗಳಲ್ಲಿ ದಿನಾಂಕ: 13.11.2024 ರಂದು ನೀಡಿರುವ ಆದೇಶ.

2 ಘನ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 14604/2024, ಎಸ್.ಎಲ್.ಪಿ(ಸಿ) ಸಂಖ್ಯೆ: 36440/2014 ರಲ್ಲಿ ನೀಡಿರುವ ಆದೇಶ ದಿನಾಂಕ: 17.12.2024.

3 ನಗರ ಪಾಲಿಕೆಯ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ: ಬೆಪೂನಪಾ/ಆ/ಪಿಆರ್/158/25-26, ದಿನಾಂಕ:21.11.2025

4. ಈ ಕಛೇರಿ ಆದೇಶ ಸಂಖ್ಯೆ: ಬೆಪೂನಪಾ/ಆ/ಪಿಆರ್/54/25-26, ದಿನಾಂಕ:21.11.2025

5. ಈ ಕಚೇರಿ ಆದೇಶ ಸಂಖ್ಯೆ: ಬೆಪೂನಪಾ/ಆ/ಪಿಆರ್/53/25-26, ದಿನಾಂಕ:21.11.2025

6. ಈ ಕಚೇರಿ ಆದೇಶ ಸಂಖ್ಯೆ: ಬೆಪೂನಪಾ/ಆ/ಪಿಆರ್/55/25-26, ದಿನಾಂಕ:21.11.2025

ಪ್ರಸ್ತಾವನೆ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯನ್ನು ಗ್ರೇಟರ್ ಬೆಂಗಳೂರು ಪ್ರದೇಶವೆಂದು ದಿನಾಂಕ: 15.05.2025ರ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿ, ಈ ವ್ಯಾಪ್ತಿಗೆ ಐದು ನಗರ ಪಾಲಿಕೆಗಳನ್ನು ರಚಿಸಲಾಗಿದೆ. ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಂಜೂರಾತಿ ನಕ್ಷೆ ಉಲ್ಲಂಘಿಸಿ ಮತ್ತು ನಿಯಮಾವಳಿಗಳನ್ನು ಉಲ್ಲಂಘಿಸಿ ಅನಧಿಕೃತವಾಗಿ ನಿರ್ಮಾಣ ಮಾಡುವ ಕಟ್ಟಡಗಳ ವಿರುದ್ಧ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024 ರಡಿಯಲ್ಲಿ ಕಲ್ಪಿಸಿರುವ ಅವಕಾಶಗಳನ್ನು ಅನುಷ್ಠಾಗೊಳಿಸುವ ನಿಟ್ಟಿನಲ್ಲಿ ಬೆಂಗಳೂರು ಪೂರ್ವ ನಗರ ಪಾಲಿಕೆಯಿಂದ ಕ್ರಮ ಕೈಗೊಳ್ಳುವ ಸಂಬಂಧ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

1) <u>ಮಂಜೂರಾತಿ ನಕ್ಷೆ ಮತ್ತು ದಾಖಲಾತಿಗಳು ಪಾಲಿಕೆಯ ವಿವಿಧ ಅಧಿಕಾರಿಗಳ ಪರಿಶೀಲನೆಗೆ ಲಭ್ಯವಾಗುವಂತೆ ಪ್ರಚುರಪಡಿಸುವುದು:</u>

i) ಘನ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 20056/2019 (ಎಲ್‌ಬಿ-ಬಿಎಂಪಿ) ರಲ್ಲಿ ದಿನಾಂಕ: 12.02.2024 ರಂದು ಹೊರಡಿಸಿರುವ ಆದೇಶದ ಹಿನ್ನೆಲೆಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024ರ ಕಲಂ 243 ಮತ್ತು 244 ರಡಿಯಲ್ಲಿ ಕಾರ್ಯನಿರ್ವಹಿಸಬೇಕಾದ ಅಧಿಕಾರಿಗಳಿಗೆ ಮಂಜೂರಾತಿ ನಕ್ಷೆ ಲಭ್ಯವಾಗುವಂತೆ ಓ.ಬಿ.ಪಿ.ಎಸ್ ಅಂತರ್ಜಾಲ ತಂತ್ರಾಂಶದಲ್ಲಿ Consoleಗಳನ್ನು ಈಗಾಗಲೇ ಸೃಜಿಸಲಾಗಿರುತ್ತದೆ. ಈ ಮಾರ್ಗಸೂಚಿಯಲ್ಲಿ ತಿಳಿಸಿದ ಮತ್ತು ಉಲ್ಲೇಖ(3) ರಂತೆ ನೀಡಲಾಗಿರುವ ಅಧಿಕಾರ ಪ್ರತ್ಯಾಯೋಜನೆಯಂತೆ ಅಧಿಕಾರ ಹೊಂದಿರುವ

ಸಂಬಂದಪಟ್ಟ ಅಧಿಕಾರಿಗಳು ಕಾಯ್ದೆಯ ಅವಕಾಶಗಳನ್ನು ಅರ್ಥೈಸಿಕೊಂಡು ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಅಂತಹ ಕಟ್ಟಡಗಳ ವಿರುದ್ಧ ಅಗತ್ಯ ಕ್ರಮ ಕೊಳ್ಳುವಂತೆ ತಿಳಿಸಿದೆ.

ii) ವಾರ್ಡ್‌ನ ಕಾರ್ಯವ್ಯಾಪ್ತಿಯ ಕಿರಿಯ/ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕಾರ್ಯಪಾಲಕ ಅಭಿಯಂತರರು ಮಂಜೂರಾದ ನಕ್ಷೆಗಳನ್ನು ಪರಿಶೀಲಿಸಲು ಸೃಜಿಸಲಾಗಿರುವ Console ನಲ್ಲಿ ಲಭ್ಯವಾಗುವ ಮಂಜೂರಾದ ನಕ್ಷೆಗಳ ವಿವರಗಳನ್ನು ಪಡೆದುಕೊಳ್ಳತಕ್ಕದ್ದು.

iii) ನಿರ್ಮಾಣವಾಗುತ್ತಿರುವ ಕಟ್ಟಡಗಳು ಮಂಜೂರಾತಿ ಪಡೆದಿರುವ ಬಗ್ಗೆ ಮತ್ತು ನಕ್ಷೆಗೆ ಅನುಗುಣವಾಗಿ ನಿರ್ಮಾಣವಾಗುತ್ತಿರುವ ಬಗ್ಗೆ ಸಂಬಂಧಪಟ್ಟ ವಾರ್ಡಿನ ಕಾರ್ಯವ್ಯಾಪ್ತಿಯ ಕಿರಿಯ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಉಲ್ಲಂಘನೆಗಳಾಗದಂತೆ ನಿಗಾವಹಿಸುವುದು.

2) <u>ಮಂಜೂರಾದ ನಕ್ಷೆಗಳನ್ನು ಉಲ್ಲಂಘಿಸಿ ನಿರ್ಮಿಸುವ ಕಟ್ಟಡಗಳು ಹಾಗೂ ನಕ್ಷೆ ಮಂಜೂರಾತಿ ಪಡೆಯದೆ ಅನಧಿಕೃತವಾಗಿ ನಿರ್ಮಾಣ ಮಾಡುತ್ತಿರುವ ಕಟ್ಟಡಗಳ ಬಗ್ಗೆ ಸಾರ್ವಜನಿಕರಿಂದ ಸಲ್ಲಿಕೆಯಾಗುವ ದೂರುಗಳ ಬಗ್ಗೆ ಕ್ರಮ ವಹಿಸುವ ಬಗ್ಗೆ</u>

i) ಮಂಜೂರಾದ ನಕ್ಷೆಗಳನ್ನು ಉಲ್ಲಂಘಿಸಿ ನಿರ್ಮಿಸುವ ಕಟ್ಟಡಗಳು ಮತ್ತು ಅನಧಿಕೃತ ನಿರ್ಮಾಣಗಳ ಕುರಿತು ಸಾರ್ವಜನಿಕರಿಂದ ಸ್ವೀಕೃತವಾಗುವ ದೂರುಗಳ ಹಾಗೂ ನಕ್ಷೆ ಮಂಜೂರಾತಿ ಪಡೆದು ವ್ಯತಿರಿಕ್ತವಾಗಿ ನಿರ್ಮಾಣ ಮಾಡುತ್ತಿರುವ ಕಟ್ಟಡಗಳ ಬಗ್ಗೆ ಸ್ವೀಕೃತವಾಗುವ ದೂರುಗಳನ್ನು ಸಂಬಂಧಪಟ್ಟ ಜಂಟಿ ಆಯುಕ್ತರು ರವರ ಕಛೇರಿಯಲ್ಲಿ ಸ್ವೀಕರಿಸಿ, ಸದರಿ ದೂರುಗಳನ್ನು 3 ದಿನಗಳೊಳಗಾಗಿ ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಪರಿಶೀಲನೆಗೆ ಮತ್ತು ಮುಂದಿನ ಕ್ರಮ ಕೈಗೊಳ್ಳಲು ಕಳುಹಿಸುವುದು.

ii) ಮಂಜೂರಾದ ನಕ್ಷೆಗಳನ್ನು ಉಲ್ಲಂಘಿಸಿ ನಿರ್ಮಿಸುವ ಕಟ್ಟಡಗಳು ಮತ್ತು ಅನಧಿಕೃತ ನಿರ್ಮಾಣಗಳ ಕುರಿತು ಸಾರ್ವಜನಿಕರಿಂದ ಸ್ವೀಕೃತವಾಗುವ ದೂರುಗಳ ವಹಿಯನ್ನು ಜಂಟಿ ಆಯುಕ್ತರ ಕಚೇರಿಯಲ್ಲಿ ನಿರ್ವಹಿಸಲು ಪ್ರತಿ ವಲಯದ ನಗರ ಯೋಜನಾ ಕಚೇರಿಯಲ್ಲಿ ಒಬ್ಬ ಸಹಾಯಕ ಅಭಿಯಂತರರಿಗೆ ಹಾಗೂ ಸಹಾಯಕ ನಿರ್ದೇಶಕರಿಗೆ ವಹಿಸುವುದು ಮತ್ತು ಉಪ ನಿರ್ದೇಶಕರು ಈ ಬಗ್ಗೆ ಆಗಾಗ್ಗೆ ಪರಿಶೀಲಿಸಿಕೊಳ್ಳುವುದು.

3) <u>ಕಟ್ಟಡ ಉಲ್ಲಂಘನೆ/ ಅನಧಿಕೃತ ನಿರ್ಮಾಣಗಳ ಬಗ್ಗೆ ಸಾರ್ವಜನಿಕರಿಂದ ಸ್ವೀಕೃತವಾಗುವ ದೂರುಗಳ ಕುರಿತು ಸ್ಥಳ ಪರಿಶೀಲನೆ ಕಾರ್ಯ ವಿಧಾನ:</u>

(i) ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಟ್ಟಡಗಳ ನಿರ್ಮಾಣ ಉಲ್ಲಂಘನೆ/ ಅನಧಿಕೃತ ನಿರ್ಮಾಣಗಳ ಕುರಿತು ಸ್ವೀಕೃತವಾಗುವ ಎಲ್ಲಾ ಬಗೆಯ ದೂರುಗಳನ್ನು ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್‌ನ ಕಿರಿಯ/ಸಹಾಯಕ ಅಭಿಯಂತರಿಗೆ ಪರಿಶೀಲನೆಗೆ ಕಳುಹಿಸುವುದು.

(ii) ದೂರು ಸ್ವೀಕೃತವಾದ 3 ದಿನಗಳೊಳಗಾಗಿ ಸಂಬಂಧಪಟ್ಟ ವಾರ್ಡ್‌ನ ಕಾರ್ಯವ್ಯಾಪ್ತಿಯ ಕಿರಿಯ/ಸಹಾಯಕ ಅಭಿಯಂತರರು ಕಟ್ಟಡ ನಕ್ಷೆ ಉಲ್ಲಂಘನೆ/ಅನಧಿಕೃತ ನಿರ್ಮಾಣದ ವಿವಿಧ ಉಲ್ಲಂಘನೆಗಳಾದ ನಡುಜಾಗಗಳು, ಒಟ್ಟು ಅಂತಸ್ತುಗಳು, ಇನ್ನಾವುದೇ ರೀತಿಯ ಉಲ್ಲಂಘನೆಗಳು ಮೇಲ್ನೋಟಕ್ಕೆ ಕಂಡು ಬಂದಲ್ಲಿ ಈ ಬಗ್ಗೆ ವರದಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸಲ್ಲಿಸುವುದು. ಈ ಹಂತದಲ್ಲಿ ಕಟ್ಟಡದ ಆವರಣದ (Premises) ಹೊರಭಾಗದಿಂದಲೇ ಪರಿಶೀಲಿಸಿಕೊಳ್ಳಬಹುದು.

(iii) ಸದರಿ ಕಟ್ಟಡ ಮಾಲೀಕರ ಸಮಕ್ಷಮದಲ್ಲಿ ಉಲ್ಲಂಘನೆಗಳ ಬಗ್ಗೆ ವಿವರವಾಗಿ ಪರಿಶೀಲಿಸಲು ಹಾಗೂ ಸಂಬಂದಪಟ್ಟ ದಾಖಲಾತಿಗಳನ್ನು ಹಾಜರು ಪಡಿಸಲು ದಿನಾಂಕ ನಿಗಧಿಪಡಿಸಿ ನೋಟಿಸ್ ಅನ್ನು ಜಿ.ಬಿ.ಜಿ ಕಾಯ್ದೆ 2024ರ ಕಲಂ 311 & 312 ರಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಟ್ಟಡ ನಿರ್ಮಾಣದಾರರು/ಮಾಲೀಕರಿಗೆ ನೊಂದಾಯಿತ ಅಂಚೆ/ಇ-ಮೇಲ್ ಮೂಲಕ ಜಾರಿಗೊಳಿಸುವುದು. ನೋಟಿಸ್ ಜಾರಿಗೊಳಿಸುವ ಸಂದರ್ಭದಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಕಲಂ 345 ರಡಿ ಈ ಕೆಳಗೆ ತಿಳಿಸಿರುವ ವಿಧಾನಗಳಂತೆ ಜಾರಿಗೊಳಿಸುವುದು.

(a) ಕಟ್ಟಡದ ಮಾಲೀಕರು/ಅಧಿಭೋಗದಾರರು/ ನಿರ್ಮಾಣದಾರರಿಗೆ ಕಾರಣ ಕೇಳುವ ನೋಟಿಸ್‌ನೊಂದಿಗೆ ತಾತ್ಕಾಲಿಕ ಆದೇಶ ಅಥವಾ ಸ್ಥಿರೀಕರಣದ ಆದೇಶ/ಇನ್ನಾವುದೇ ದಾಖಲೆಯನ್ನು ಅಂತಹ ವ್ಯಕ್ತಿಗೆ ಖುದ್ದು ನೀಡುವ ಮೂಲಕ ಜಾರಿ ಮಾಡಬಹುದಾಗಿರುತ್ತದೆ.

(b) ಅದಲ್ಲದೆ ಅಂತಹ ಕಟ್ಟಡ ಮಾಲೀಕರು/ ಅಧಿಭೋಗದಾರರು/ನಿರ್ಮಾಣದಾರರ ಅಧಿಕೃತ ಇ-ಮೇಲ್ ಅಥವಾ ಇತರ ವಿದ್ಯುನ್ಮಾನ ಮಾಧ್ಯಮದ ಮಾಹಿತಿ ಲಭ್ಯವಿದ್ದಲ್ಲಿ ಅಂತಹ ಮಾಧ್ಯಮದ ಮುಖಾಂತರ ದಾಖಲಾತಿಗಳನ್ನು ಜಾರಿ ಮಾಡಬಹುದಾಗಿರುತ್ತದೆ.

(c) ಅಂತಹ ಕಟ್ಟಡ ಮಾಲೀಕರು/ ಅಧಿಭೋಗದಾರರು/ನಿರ್ಮಾಣದಾರರು ಮೇಲ್ಕಂಡ ಪ್ಯಾರಾ (a) ಮತ್ತು (b) ರಂತೆ ನೋಟಿಸ್/ ಆದೇಶ /ದಾಖಲೆಯನ್ನು ಆ ವ್ಯಕ್ತಿ ಆ ಸ್ಥಳದಲ್ಲಾಗಲಿ /ಆತನ ವಾಸ ಸ್ಥಳದಲ್ಲಾಗಲಿ ವ್ಯವಹಾರ ನಡೆಸುವ ಸ್ಥಳದಲ್ಲಾಗಲಿ ಲಭ್ಯವಾಗದಿದ್ದಲ್ಲಿ ಅಥವಾ ಆ ವ್ಯಕ್ತಿಗೆ ನೋಟೀಸ್/ಆದೇಶ/ದಾಖಲೆ ಜಾರಿ ಮಾಡುವ ಸಂದರ್ಭದಲ್ಲಿ ಆತನಿಗೆ ಸಂಬಂಧಪಟ್ಟ ಏಜೆಂಟ್, ಗುಮಾಸ್ತ, ಸೇವಕ ಅಥವಾ ಆತನ ಕುಟುಂಬದ ಯಾವುದೇ ಸದಸ್ಯನು ಲಭ್ಯವಿದ್ದಲ್ಲಿ ಅಂತಹ ವ್ಯಕ್ತಿಗೆ ನೋಟಿಸ್/ಆದೇಶ/ದಾಖಲೆಯನ್ನು ನೀಡುವ ಮೂಲಕ ಜಾರಿ ಮಾಡತಕ್ಕದ್ದು.

(d) ಅಂತಹ ಕಟ್ಟಡದ ಮಾಲೀಕರು/ಅಧಿಭೋಗದಾರರು/ನಿರ್ಮಾಣದಾರರು ಕಟ್ಟಡ ನಿವೇಶನದಲ್ಲಿ ಲಭ್ಯವಿಲ್ಲದಿದ್ದಲ್ಲಿ ಅಥವಾ ಬೇರೆ ಸ್ಥಳದಲ್ಲಿ ವಾಸವಾಗಿರುವ ವಿಳಾಸವು ಲಭ್ಯವಾದಲ್ಲಿ ಅಂತಹ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ನೋಟಿಸ್/ಆದೇಶ/ದಾಖಲೆಯನ್ನು ಕಳುಹಿಸುವ ವಿಧಾನದ ಮೂಲಕ ಜಾರಿ ಮಾಡಲು ಕ್ರಮವಹಿಸುವುದು.

(e) ಮೇಲೆ ಹೇಳಿದ ಯಾವುದೇ ವಿಧಾನದಿಂದ ನೋಟಿಸ್/ಆದೇಶ/ದಾಖಲೆಯನ್ನು ಜಾರಿ ಮಾಡಲಾಗದಿದ್ದಾಗ ಅದನ್ನು ಅವನ ವಾಸದ ಅಥವಾ ವ್ಯವಹಾರ ಸ್ಥಳದ ಯಾವುದೇ ಎದ್ದು ಕಾಣುವ ಭಾಗದಲ್ಲಿ ಅಂಟಿಸುವ ಮೂಲಕ ಜಾರಿ ಮಾಡಬಹುದಾಗಿರುತ್ತದೆ. ಈ ರೀತಿ ಅಂಟಿಸುವ ಮೂಲಕ ಕ್ರಮ ವಹಿಸಿದಲ್ಲಿ ಮಹಜರ್ ಕ್ರಮ ಜರುಗಿಸಿ ಫೋಟೋ ತೆಗೆದು ಮಹಜರ್‌ನಲ್ಲಿ ನಮೂದಿಸಿ ಲಗತ್ತಿಸಬೇಕಾಗುತ್ತದೆ. (ಕಟ್ಟಡದ ಮಾಲೀಕರು/ ಅಧಿಭೋಗದಾರರು/ ನಿರ್ಮಾಣದಾರರು ಜಂಟಿಯಾಗಿದ್ದಲ್ಲಿ ಅಂತಹವರ ಪೈಕಿ ಒಬ್ಬರಿಗೆ ನೋಟೀಸ್/ಆದೇಶ /ದಾಖಲೆಯನ್ನು ಜಾರಿ ಮಾಡಬಹುದಾಗಿದೆ).

(iv) ಸದರಿ ನೋಟಿಸ್‌ನಲ್ಲಿ ಕಟ್ಟಡದ ಮಾಲೀಕರಿಗೆ ಮೇಲ್ಕಂಡ ಯಾವುದಾದರೂ ಒಂದು ರೂಪದಲ್ಲಿ ಸ್ವೀಕೃತವಾದ ದಿನಾಂಕದಿಂದ ಕನಿಷ್ಠ 15 ದಿನಗಳ ಕಾಲಾವಕಾಶ ನೀಡಿ, ಸ್ಥಳ ಪರಿಶೀಲನಾ ದಿನಾಂಕವನ್ನು ನಿರ್ಧರಿಸಿ ನಮೂದಿಸುವುದು.

(v) ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಮಂಜೂರಾತಿ ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಾಣ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ಪರಿಶೀಲಿಸಿ ಉಲ್ಲಂಘನೆಗಳನ್ನು ಗಮನಿಸಿದಲ್ಲಿ ಮೇಲ್ಕಂಡ ಕ್ರಮ ಸಂಖ್ಯೆ: 3ರ (ii) ರಿಂದ (iv) ರಂತೆ ಮುಂದಿನ ಕ್ರಮ ಜರುಗಿಸುವುದು ಹಾಗೂ ನಗರ ಯೋಜನಾ ವಿಭಾಗದ ಸಹಾಯಕ ನಿರ್ದೇಶಕರುಗಳಿಂದ ಪ್ಲಿಂತ್ ನಿರ್ಮಾಣದವರೆಗೆ ಉಲ್ಲಂಘನೆಗಳ ಕುರಿತು ಸಲ್ಲಿಕೆಯಾಗುವ ವರದಿಯಂತೆಯೂ ಸಹ ಕ್ರಮ ಕೈಗೊಳ್ಳುವುದು.

(vi) ಗ್ರೇಟರ್ ಬೆಂಗಳೂರು ಆಡಳಿತ ಚಾಪ್ಟರಡಿಯಲ್ಲಿ ಮಂಜೂರಾತಿ ನಕ್ಷೆ ಉಲ್ಲಂಘನೆ ಬಗ್ಗೆ ಹಾಗೂ ಅನಧಿಕೃತ ನಿರ್ಮಾಣಗಳ ಬಗ್ಗೆ ಪರಿಶೀಲಿಸಲು ಹಾಗೂ ಸದರಿ ಸ್ಥಳಕ್ಕೆ ಪ್ರವೇಶಿಸಲು ಮತ್ತು ದಾಖಲಾತಿಗಳನ್ನು ಹಾಜರುಪಡಿಸುವಂತೆ ತಿಳಿಸಲು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಕಲಂ 243(2), ಕಲಂ 311 ಮತ್ತು ಕಲಂ 312(1)(ಬಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಸಂಬಂಧಪಟ್ಟ ವಾರ್ಡ್‌ನ ಕಾರ್ಯವ್ಯಾಪ್ತಿಯ ಕಿರಿಯ/ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನಗರ ಯೋಜಕರು/ಸಹಾಯಕ ನಿರ್ದೇಶಕರು ಹಾಗೂ ಜಂಟಿ ಆಯುಕ್ತರಿಗೆ ಉಲ್ಲೇಖ (3) ರಂತೆ ಪ್ರತ್ಯಾಯೋಜಿಸಲಾಗಿದೆ. ಅದರಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಜರುಗಿಸುವುದು.

4) <u>ನಕ್ಷೆ ಮಂಜೂರಾತಿ ಉಲ್ಲಂಘಿಸಿ/ನಕ್ಷೆ ಮಂಜೂರಾತಿ ಪಡೆಯದೇ ನಿರ್ಮಾಣ ಕೈಗೊಂಡಿರುವ ಕಟ್ಟಡಗಳ ಸ್ಥಳ ಮಹಜರ್ ವರದಿ ಕುರಿತು.</u>

ಅಧಿಕಾರ ಪ್ರತ್ಯಾಯೋಜನೆ ಹೊಂದಿರುವ ವಾರ್ಡ್‌ನ ಕಾರ್ಯವ್ಯಾಪ್ತಿಯ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ನಕ್ಷೆ ಮಂಜೂರಾತಿ ಉಲ್ಲಂಘಿಸಿ/ನಕ್ಷೆ ಮಂಜೂರಾತಿ ಪಡೆಯದೇ ನಿರ್ಮಾಣ ಕೈಗೊಂಡಿರುವ ಕಟ್ಟಡಗಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಕೈಗೊಂಡು ಘನ ಉಚ್ಚನ್ಯಾಯಾಲಯವು WP No. 6184 of 2015 (LB–BMP) ರ ದಿನಾಂಕ:10.03.2015 ರ ನೀಡಿರುವ ನಿರ್ದೇಶನಗಳಂತೆ ಕಟ್ಟಡ ಉಲ್ಲಂಘನೆ/ಅನಧಿಕೃತ ನಿರ್ಮಾಣವನ್ನು ಕಟ್ಟಡ ಮಾಲೀಕರು/ನಿರ್ಮಾಣದಾರರ ಸಮಕ್ಷಮ ಪರಿಶೀಲಿಸಿ ಮಹಜರ್ ವರದಿ ಸಿದ್ಧಪಡಿಸುವುದು. ಮಹಜರ್ ವರದಿಯಲ್ಲಿ ಕಟ್ಟಡದ ವ್ಯತಿರಿಕ್ತ ಭಾಗಗಳ ಕೋಷ್ಟಕ (Deviations Statement) ಉಲ್ಲಂಘನೆ ಗುರುತಿಸಿರುವ ನಕ್ಷೆ (Deviations Sketch) ಕಟ್ಟಡದ ಉಲ್ಲಂಘನೆಗಳನ್ನು ತೋರಿಸುವ ಸ್ಪಷ್ಟ Geo-tag ಛಾಯಾಚಿತ್ರಗಳು, ಮಹಜರ್ ಸಮಯದಲ್ಲಿ ಉಪಸ್ಥಿತವಾಗಿರುವ ಅಧಿಕಾರಿಗಳು, ಕಟ್ಟಡದ ಮಾಲೀಕರು, ಅಭಿವೃದ್ಧಿದಾರರು, ನಿರ್ಮಾಣದ ಮೇಲ್ವಿಚಾರಣೆ ಕೈಗೊಂಡು ವಾಸ್ತುಶಿಲ್ಪಿ / ಇಂಜಿನಿಯರ್ ರವರುಗಳ ಸಹಿಯನ್ನು ಮಹಜರ್ ವರದಿಯಲ್ಲಿ ಪಡೆಯುವುದು. ಒಂದು ವೇಳೆ ಮಾಲೀಕರು/ನಿರ್ಮಾಣದಾರರು ಅಥವಾ ಸಂಬಂಧಪಟ್ಟ ನೊಂದಾಯಿತ ವಾಸ್ತುಶಿಲ್ಪಿ/ಇಂಜಿನಿಯರ್ ಸೂಚಿತ ದಿನಾಂಕ/ಸಮಯದಂದು ಸ್ಥಳ ಪರಿಶೀಲನೆಗೆ ಹಾಜರಾಗದಿದ್ದಲ್ಲಿ ಅವರ ಅನುಪಸ್ಥಿತಿಯಲ್ಲಿ ಸ್ಥಳ ಪರಿಶೀಲನೆ ಕೈಗೊಳ್ಳುವುದು. ಸಂಬಂಧಪಟ್ಟ ಸಹಾಯಕ ನಿರ್ದೇಶಕರುಗಳು ಕೂಡ ಈ ಸಂಬಂಧ ಸದರಿಯವರಿಗೆ ಸಹಕಾರ ನೀಡುವುದು.

5) <u>ಕಟ್ಟಡ ನಿರ್ಮಾಣದಾರರಿಗೆ ಕಾಯ್ದೆಯ ಕಲಂ 243(3)(d) ರಡಿ ತಾತ್ಕಾಲಿಕ ಆದೇಶ ಸಿದ್ಧಪಡಿಸಿ ನೋಟಿಸ್ ಮೂಲಕ ಜಾರಿಗೊಳಿಸುವುದು:</u>

(i) ಮೇಲ್ಕಂಡ ಸ್ಥಳ ಪರಿಶೀಲನೆ ಮತ್ತು ಮಹಜರ್ ವರದಿಯಂತೆ ಗುರುತಿಸಲಾದ ವಿವಿಧ ರೀತಿಯ ಉಲ್ಲಂಘನೆಗಳನ್ನು ಕೋಷ್ಟಕ ರೂಪದಲ್ಲಿ ನಮೂದಿಸಿ ದೃಢೀಕರಿಸಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಸಲ್ಲಿಸುವ ವರದಿಯನ್ನು ವಲಯ ಕಚೇರಿಯ ನಗರ ಯೋಜನಾ ವಿಭಾಗದ ಉಪ ನಿರ್ದೇಶಕರ ಸಹಕಾರದೊಂದಿಗೆ ಮತ್ತು ಪಾಲಿಕೆಯ ಕೇಂದ್ರ ಕಚೇರಿಯ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಜಂಟಿ ನಿರ್ದೇಶಕರು, ನಗರ ಯೋಜನೆ ಇವರ ಸಹಕಾರದೊಂದಿಗೆ ಜಂಟಿ ಆಯುಕ್ತರು ಪರಾಮರ್ಶಿಸಿ, ಮೇಲಿನ ಕ್ರಮ ಸಂಖ್ಯೆ: (3) & (4) ರಲ್ಲಿ ವಿವರಿಸಿರುವಂತೆ ಕ್ರಮ ಅನುಸರಿಸಿರುವ ಬಗ್ಗೆ ಹಾಗೂ ಕಟ್ಟಡ ನಿರ್ಮಾಣದಲ್ಲಿ ಉಲ್ಲಂಘನೆಗಳಾಗಿರುವ ಬಗ್ಗೆ ಅಥವಾ ಅನಧಿಕೃತವಾಗಿ ಕಟ್ಟಡ ನಿರ್ಮಾಣಗೊಂಡಿರುವ ಬಗ್ಗೆ ದೃಢಪಡಿಸಿಕೊಳ್ಳುವುದು, ನಂತರ ಉಲ್ಲೇಖ (3)ರ ಅಧಿಕಾರ ಪ್ರತ್ಯಾಯೋಜನೆಯಂತೆ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯ ಕಲಂ 243(3)(c) ರಡಿ ತಾತ್ಕಾಲಿಕ ಆದೇಶವನ್ನು ಹಾಗೂ ಕಲಂ 243(3)(d) ರಡಿಯಲ್ಲಿ ನೋಟಿಸ್‌ನ್ನು ಸಿದ್ಧಪಡಿಸುವುದು. ತಾತ್ಕಾಲಿಕ ಆದೇಶದಲ್ಲಿ ನಿಗದಿಪಡಿಸಿದ ದಿನಾಂಕದಂದು ಕಟ್ಟಡದ ಮಾಲೀಕರು/ ಅಭಿವೃದ್ಧಿದಾರರು / ಮಾಲೀಕರ ಅಧಿಕೃತ ಪ್ರತಿನಿಧಿಗಳು ವಿಚಾರಣೆಗೆ ಖುದ್ದಾಗಿ ಹಾಜರಾಗತಕ್ಕದ್ದು ಎಂದು ತಿಳಿಸುವುದು. ಅದರಲ್ಲಿ 15 ದಿನಗಳು ಕಡಿಮೆಯಿಲ್ಲದ ಕಾಲಾವಧಿ ನೀಡಿ, ತಾತ್ಕಾಲಿಕ ಆದೇಶವನ್ನು ಏಕೆ ಸ್ಥಿರೀಕರಿಸಬಾರದು ಎಂಬ ಬಗ್ಗೆ ಸಮಜಾಯಿಷಿ ನೀಡುವಂತೆ ತಿಳಿಸಿ ಕಟ್ಟಡ ನಿರ್ಮಾಣದಾರರಿಗೆ ನೋಟಿಸ್ ಜಾರಿಮಾಡತಕ್ಕದ್ದು.

(ii) ತಾತ್ಕಾಲಿಕ ಆದೇಶವನ್ನು ಜಾರಿಮಾಡಲು ಘನ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 20056/2019 (ಎಲ್‌ಬಿ–ಬಿಎಂಪಿ) ಯಲ್ಲಿ ಹಾಗೂ ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 295/2022 ರಲ್ಲಿ ಆದೇಶಿಸಿರುವಂತೆ ಹಾಗೂ ಜಿಬಿಎ ಕಾಯ್ದೆ ಕಲಂ 345 ರಡಿ ಮೇಲಿನ ಕ್ರಮ ಸಂಖ್ಯೆ: 3(iii)ರ (a) ರಿಂದ (e) ರಲ್ಲಿ ತಿಳಿಸಿರುವ ವಿಧಾನಗಳಂತೆ ಜಂಟಿ ಆಯುಕ್ತರು ಜಾರಿ ಮಾಡತಕ್ಕದ್ದು.

6) ತಾತ್ಕಾಲಿಕ ಆದೇಶ ಹೊರಡಿಸಿರುವ ಪ್ರಕರಣಗಳ ವಿಚಾರಣೆ ನಡೆಸುವ ಕುರಿತು.

I) ಘನ ಸರ್ವೋಚ್ಚ ನ್ಯಾಯಾಲಯದ ಉಲ್ಲೇಖ (1) ರ ಆದೇಶದ ಕ್ರಮ ಸಂಖ್ಯೆ: IX. 91. B. ರಲ್ಲಿ ಕಟ್ಟಡ ನಿರ್ಮಾಣದಾರರಿಗೆ/ ಖುದ್ದು ವಿಚಾರಣೆ ಅವಕಾಶ ನೀಡುವಂತೆ ಆದೇಶಿಸಲಾಗಿದೆ. ಅದರಂತೆ ಕಾಯ್ದೆಯ ಕಲಂ 243(3)(d) ರಂತೆ ತಾತ್ಕಾಲಿಕ ಆದೇಶ ಹೊರಡಿಸಿರುವ ಪ್ರಕರಣಗಳಿಗೆ ಜಂಟಿ

ಆಯುಕ್ತರು ರವರು ಕಾಲಕಾಲಕ್ಕೆ ವಿಚಾರಣೆಯನ್ನು ನಡೆಸುವುದು. ವಿಚಾರಣೆಯ ದಿನದಂದು ಕಟ್ಟಡ ನಿರ್ಮಾಣದಾರರು ಹಾಜರಾಗಿ ನೀಡುವ ಸಮಜಾಯಿಷಿಯನ್ನು ಪಡೆಯತಕ್ಕದ್ದು ಮತ್ತು ನಡಾವಳಿಗಳನ್ನು ದಾಖಲಿಸುವುದು.

2) ಕಟ್ಟಡ ಮಾಲೀಕರು ಖುದ್ದು ವಿಚಾರಣೆಗೆ ಹಾಜರಾದ ಸಂದರ್ಭದಲ್ಲಿ ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮಹಜರ್ ವರದಿ ಮತ್ತು ಇತರೆ ದಾಖಲಾತಿಗಳೊಂದಿಗೆ ಹಾಗೂ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ನಗರ ಯೋಜನೆ ಹಾಜರಿದ್ದು, ನಿರ್ಮಾಣದಾರರ ಸಮಜಾಯಿಷಿ ಹಾಗೂ ನಿಯಮಾವಳಿಗಳ ಅವಕಾಶಗಳ ಬಗ್ಗೆ ಮಾಹಿತಿ ನೀಡಿ ಜಂಟಿ ಆಯುಕ್ತರು ನಿರ್ಧಾರ ಕೈಗೊಳ್ಳುವಲ್ಲಿ ಸಹಕರಿಸುವುದು. ಪಾಲಿಕೆಯ ಕೇಂದ್ರ ಕಚೇರಿಯಿಂದ ಮಂಜೂರಾತಿ ನೀಡಿದ್ದ ಕಟ್ಟಡಗಳಿಗೆ ಸಂಬಂಧಿಸಿದಂತೆ ಜಂಟಿ ನಿರ್ದೇಶಕರು ಹಾಜರಿದ್ದು, ಜಂಟಿ ಆಯುಕ್ತರು ನಿರ್ಧಾರ ಕೈಗೊಳ್ಳುವಲ್ಲಿ ಸಹಕಾರ ನೀಡುವುದು.

7) <u>ಕಾಯ್ದೆಯ ಕಲಂ 243(3)(e) ಅವಕಾಶ ಹಾಗೂ ಕಲಂ 244(1) ರಡಿಯಲ್ಲಿ ಸ್ಥಿರೀಕರಣ ಆದೇಶ ಜಾರಿಗೊಳಿಸುವುದು:</u>

(i) ಮೇಲ್ಕಂಡಂತೆ ಜಾರಿಗೊಳಿಸಿರುವ ಕಾಯ್ದೆಯ ಕಲಂ 243(3)(d) ರಡಿ ತಾತ್ಕಾಲಿಕ ಆದೇಶ ಹಾಗೂ ನೋಟಿಸ್‌ಗೆ ಮಾಲೀಕರು/ನಿರ್ಮಾಣದಾರರು ನೀಡುವ ಸಮಜಾಯಿಷಿಯನ್ನು ಖುದ್ದು ಹಾಜರಾತಿಯಲ್ಲಿ ನೀಡಿದ ವಿವರಣೆ/ಆಕ್ಷೇಪಣೆಗಳನ್ನು ನಗರ ಯೋಜನಾ ವಿಭಾಗದ ಸಹಾಯಕ ನಿರ್ದೇಶಕರುಗಳು/ಉಪ ನಿರ್ದೇಶಕರುಗಳು ಮತ್ತು ಕೇಂದ್ರ ಕಚೇರಿಗೆ ಸಂಬಂದಪಟ್ಟಂತೆ ಜಂಟಿ ನಿರ್ದೇಶಕರು ರವರುಗಳ ಮೂಲಕ ಪರಿಶೀಲಿಸಿಕೊಂಡು ತಾತ್ಕಾಲಿಕ ಆದೇಶದಂತೆ ಉಲ್ಲಂಘನೆ/ಅನಧಿಕೃತ ಕಟ್ಟಡ ನಿರ್ಮಾಣವನ್ನು ತೆರವು ಮಾಡಿದ್ದಲ್ಲಿ ಅಥವಾ ಅವರು ಸಲ್ಲಿಸಿದ ಸಮಜಾಯಿಷಿ ಒಪ್ಪಲು ಅರ್ಹವಾಗಿದ್ದಲ್ಲಿ ಜಂಟಿ ಆಯುಕ್ತರು ಪ್ರಕರಣವನ್ನು ಮುಕ್ತಾಯಗೊಳಿಸಿ ಹಿಂಬರಹ ನೀಡುವುದು.

(ii) ಒಂದು ವೇಳೆ ಉಲ್ಲಂಘನೆಗಳು ಖಾತರಿಪಟ್ಟಲ್ಲಿ ಅಥವಾ ಕಟ್ಟಡ ಮಾಲೀಕರು ಒಪ್ಪಲು ಅರ್ಹವಾದ ಸಮಜಾಯಿಷಿಯನ್ನು ನೀಡಲು ವಿಫಲರಾಗಿದ್ದಲ್ಲಿ ಕಟ್ಟಡದ ಉಲ್ಲಂಘನೆ/ಅನಧಿಕೃತ ಭಾಗಗಳನ್ನು ತೆರವುಗೊಳಿಸಲು ಜಿಬಿಎ ಕಾಯ್ದೆ ಕಲಂ 244(1) ರಡಿಯಲ್ಲಿ ಸೂಕ್ತ ಕಾಲಾವಕಾಶವನ್ನು ನೀಡಿ ಕಲಂ 246 (2) ರಂತೆ ಮಾಲೀಕರು/ಖಾತೆದಾರರು 30 ದಿನಗಳ ಕಾಲ ಮಿತಿಯೊಳಗೆ ಉಲ್ಲಂಘನೆಗಳನ್ನು ತೆರವುಗೊಳಿಸುವಂತೆ ಆದೇಶಿಸುವುದು ಹಾಗೂ ಒಂದು ವೇಳೆ ಉಲ್ಲಂಘನೆಗಳನ್ನು ತೆರವುಗೊಳಿಸಲು ವಿಫಲರಾದಲ್ಲಿ ಜಿಬಿಎ ಕಾಯ್ದೆ-2024 ಕಲಂ 243(3)(f) ರಡಿಯಲ್ಲಿ ಮೊಕದ್ದಮೆ ದಾಖಲಿಸಲಾಗುವುದೆಂದು ಹಾಗೂ 246(3) ರಡಿಯಲ್ಲಿ ನಿಗಧಿಪಡಿಸುವ ಶಿಕ್ಷೆಗೆ ಗುರಿಯಾಗುತ್ತಿರೆಂದು, ಕಲಂ 244(2) ರಡಿಯಲ್ಲಿ ಕ್ರಮ ಕೈಗೊಂಡು ನಗರ ಪಾಲಿಕೆಯಿಂದಲೇ ಅನಧಿಕೃತ ಕಟ್ಟಡವನ್ನು/ವ್ಯತಿರಿಕ್ತ ಭಾಗವನ್ನು ತೆರವುಗೊಳಿಸಲಾಗುವುದೆಂದು ಮತ್ತು ಕಟ್ಟಡ ತೆರವುಗೊಳಿಸಲು ತಗಲುವ ವೆಚ್ಚವನ್ನು ಕಟ್ಟಡದ ಮಾಲೀಕರು/ಸ್ವಾಧೀನದಾರರಿಂದ ವಸೂಲು ಮಾಡಲಾಗುವುದೆಂದು ಸ್ಥಿರಿಕರಣ ಆದೇಶದಲ್ಲಿಯೇ ನಮೂದಿಸಿ ಕಾಯ್ದೆಯ ಕಲಂ 243(3)(e) ರೊಂದಿಗೆ ಕಲಂ 244(1) ರಡಿಯಲ್ಲಿ ಕಾಲಾವಕಾಶ ನೀಡಿ (ಸಾಮನ್ಯವಾಗಿ ಒಂದು ತಿಂಗಳ ಕಾಲಾವಕಾಶ ನೀಡುವುದು) ಸ್ಥಿರೀಕರಣ ಆದೇಶವನ್ನು ಜಂಟಿ ಆಯುಕ್ತರು ಕಟ್ಟಡದ ಮಾಲೀಕರು/ಸ್ವಾಧೀನದಾರರಿಗೆ ಜಾರಿಗೊಳಿಸತಕ್ಕದ್ದು. ಈ ಆದೇಶವು ಮಾಲೀಕರು /ನಿರ್ಮಾಣದಾರರನ್ನು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಡಿಯಲ್ಲಿ ಬಾಧ್ಯಸ್ಥಿಕೆಗೆ ಒಳಪಡಿಸುತ್ತದೆ.

(iii) ಸ್ಥಿರೀಕರಣ ಆದೇಶವನ್ನು ಜಾರಿ ಮಾಡಲು ಘನ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 20056/2019 (ಎಲ್‌ಬಿ-ಬಿಎಂಪಿ)ಯಲ್ಲಿ ಮತ್ತು ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 295/2022 ರಲ್ಲಿ ಆದೇಶಿಸಿರುವಂತೆ ಹಾಗೂ ಜಿಬಿಎ ಕಾಯ್ದೆ ಕಲಂ 345 ರಡಿ ಮೇಲಿನ ಕ್ರಮ ಸಂಖ್ಯೆ: 3(iii)ರ (a) ರಿಂದ (e) ರಲ್ಲಿ ತಿಳಿಸಿರುವ ವಿಧಾನಗಳಂತೆ ಜಂಟಿ ಆಯುಕ್ತರು ಜಾರಿ ಮಾಡತಕ್ಕದ್ದು.

(iv) ಸ್ಥಿರೀಕರಣ ಆದೇಶ ಜಾರಿ ಮಾಡಿದ ನಂತರ ಆದೇಶದಲ್ಲಿ ತಿಳಿಸಿರುವಂತೆ ಒಂದು ತಿಂಗಳ ಕಾಲಾವಕಾಶ ಲಭ್ಯವಾಗುತ್ತದೆ. ಈ ಸಮಯದಲ್ಲಿ ಮೇಲ್ಕಂಡ ಕ್ರಮ ಸಂಖ್ಯೆ 6(ii) ರಲ್ಲಿ ವಿವರಿಸಿದಂತೆ ಕಾಯ್ದೆಯ 243(3)(e) ಮತ್ತು 244(1)ರಲ್ಲಿ ಜಾರಿ ಮಾಡಿದ ಸ್ಥಿರೀಕರಣ ಆದೇಶವನ್ನೇ

ಕಾರ್ಯಪಾಲಕ ಅಭಿಯಂತರರು ಕಟ್ಟಡದ ಉಲ್ಲಂಘಿತ/ಅನಧಿಕೃತ ಭಾಗವನ್ನು ತೆರವುಗೊಳಿಸಲು ಅಂದಾಜು ಪಟ್ಟಿಯನ್ನು ತಯಾರಿಸಲು ನೀಡಿರುವ ನಿರ್ದೇಶನವೆಂದು ಪರಿಗಣಿಸಿ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು. ಜಂಟಿ ಆಯುಕ್ತರು ಸ್ಥಿರೀಕರಣ ಆದೇಶದ ಪ್ರತಿ ರವಾನಿಸಿ ಅಂದಾಜುಪಟ್ಟಿ ತಯಾರಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರರಿಗೆ ನಿರ್ದೇಶನ ನೀಡುವುದು.

ಕಟ್ಟಡ ತೆರವುಗೊಳಿಸಲು ತಗಲುವ ವೆಚ್ಚವನ್ನು ಆಯಾ ವಿಭಾಗದ ಕಾರ್ಯಪಾಲಕ ಅಭಿಯಂತರರುಗಳು ಆವರ್ತ ನಿಧಿಯಿಂದ (Revolving Fund) ಒದಗಿಸುವುದು. ಈ ಖರ್ಚಿನ ಮೊತ್ತವನ್ನು ಕಟ್ಟಡದ ಮಾಲೀಕರು/ಸ್ವಾಧೀನದಾರರಿಂದ ವಸೂಲು ಮಾಡುವಂತೆ ತಿಳಿಸಿ ವಿಭಾಗದ ಕಾರ್ಯಪಾಲಕ ಅಭಿಯಂತರರು, ಸಂಬಂಧಪಟ್ಟ ವಲಯ ಜಂಟಿ ಆಯುಕ್ತರು ರವರುಗಳ ಮೂಲಕ ಕಂದಾಯ ವಿಭಾಗಕ್ಕೆ ತಿಳಿಸುವುದು. ಅದರಂತೆ ಕಟ್ಟಡ ಮಾಲೀಕರಿಂದ ಆ ಮೊತ್ತವನ್ನು ವಸೂಲಿ ಮಾಡಲು ಕಂದಾಯ ವಿಭಾಗದಿಂದ ನಿಯಮಾನುಸಾರ ಕ್ರಮ ಕೈಗೊಳ್ಳುವುದು.

ನಕ್ಷೆ ಉಲ್ಲಂಘನೆ/ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ಸಂಬಂಧ ಉಲ್ಲೇಖ (6) ರಲ್ಲಿ ಪಾಲಿಕೆ ಮಟ್ಟದಲ್ಲಿ ಒಂದು ಮೇಲ್ವಿಚಾರಣಾ ಮತ್ತು ಸಮನ್ವಯ ಸಮಿತಿಯನ್ನು ರಚಿಸಲಾಗಿದೆ. ಆದರಂತೆ ನಗರ ಪಾಲಿಕೆಯಲ್ಲಿ ರಚಿಸಲಾಗುವ ಮೇಲ್ವಿಚಾರಣ ಮತ್ತು ಸಮನ್ವಯ ಸಮಿತಿ (Monitoring & Coordination Committee) ಪ್ರತಿ 2 ತಿಂಗಳಿಗೊಮ್ಮೆ ಸಭೆ ಸೇರಿ ಒಟ್ಟಾರೆ ತೆರವುಗೊಳಿಸಬಹುದಾದ ಉಲ್ಲಂಘಿತ ಕಟ್ಟಡಗಳ ವಿವರಗೊಂದಿಗೆ ತೆರವುಗೊಳಿಸಲು ಅಂದಾಜು ಪಟ್ಟಿಯನು ಕಾರ್ಯಪಾಲಕ ಅಭಿಯಂತರರು ತಯಾರಿಸಿ ಅಧಿಕಾರ ಪ್ರತ್ಯಾಯೋಜಿಸಿರುವಂತೆ ಅನುಮೋದನೆಯನ್ನು ಪಡೆದುಕೊಳ್ಳುವುದು.

(v) ಮೇಲ್ಕಂಡ ಕ್ರಮ ಸಂಖ್ಯೆ 7(ii) ರಲ್ಲಿ ವಿವರಿಸಿದಂತೆ ಕಾಯ್ದೆಯ 243(3)(e) ಮತ್ತು 244(I)ರಲ್ಲಿ ಸ್ಥಿರೀಕರಣ ಆದೇಶ ಜಾರಿ ಮಾಡಿದ ಸಂದರ್ಭದಲ್ಲಿ ಕಟ್ಟಡ ತೆರವುಗೊಳಿಸಲು ತಗಲುವ ವೆಚ್ಚದ ಮೊತ್ತ ತಿಳಿದಿರುವುದಿಲ್ಲ. ಹಾಗಾಗಿ ಈ ಸಂಬಂಧ ಮುಂದೆ ಅನುಸರಿಸಬೇಕಾದ ವಿಧಾನಗಳ ಬಗ್ಗೆ ಕ್ರಮ ಸಂಖ್ಯೆ 8(iv) ರಲ್ಲಿ ತಿಳಿಸಲಾಗಿದೆ.

(vi) ಕಾಯ್ದೆಯ ಕಲಂ 243(3)(d) & (e) ರಡಿಯಲ್ಲಿ ತಾತ್ಕಾಲಿಕ ಹಾಗೂ ಸ್ಥಿರೀಕರಣ ಆದೇಶ ನೀಡಿದ ನಂತರ ಕಟ್ಟಡ ಕಾಮಗಾರಿಗಳನ್ನು ಮುಂದುವರೆಸದಂತೆ ತಡೆಯುವ ಜವಾಬ್ದಾರಿ ಸಂಬಂಧಪಟ್ಟ ವಾರ್ಡ್‌ನ ಕಿರಿಯ/ಸಹಾಯಕ ಅಭಿಯಂತರರ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರದ್ದಾಗಿರುತ್ತದೆ. ಅದನ್ನು ತಡೆಯದೇ ಕಟ್ಟಡ ಕಾಮಗಾರಿಯನ್ನು ಮುಂದುವರೆಯಲು ಅವಕಾಶ ಮಾಡಿಕೊಟ್ಟಲ್ಲಿ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಜಿಬಿಎ ಕಾಯ್ದೆ-2024ರ ಕಲಂ 247 ಮತ್ತು ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿ ಶಿಸ್ತು ಕ್ರಮ ಜರುಗಿಸಲಾಗುವುದು.

(vii) ಪಾಲಿಕೆಯಿಂದ ನೀಡಲಾಗಿರುವ ನೋಟಿಸ್, 243(3)(c)(d), 244(2)ರ ಆದೇಶಗಳು ಹಾಗೂ ಘನ ನ್ಯಾಯಾಲಯಗಳಲ್ಲಿ ಮತ್ತು ಅಪೀಲು ಪ್ರಾಧಿಕಾರಗಳಲ್ಲಿ ದಾಖಲಾದ ಪ್ರಕರಣಗಳ ಬಗ್ಗೆ ಪರಿಶೀಲಿಸಿ ವಿವಿಧ ಶಾಖೆಗಳ ಜೊತೆ ಸಮನ್ವಯ ಸಾಧಿಸುವುದು.

(viii) ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 ರ ಕಲಂ 243 (4)(a) ರ ಅವಕಾಶದಂತೆ ಸ್ಥಿರೀಕರಣ ಆದೇಶ ಹೊರಡಿಸಿರುವ ಪ್ರಕರಣಗಳಲ್ಲಿ ಕಟ್ಟಡ ಕಾಮಗಾರಿಯು ಮುಂದುವರೆಯದಂತೆ ಕಟ್ಟಡವನ್ನು ಹಾಗೂ ಹೆಚ್ಚುವರಿ ಅಂತಸ್ತುಗಳನ್ನು ಸೀಲ್ ಮಾಡುವ ಅಧಿಕಾರವು ಉಲ್ಲೇಖ (3) ರಂತೆ ಸಹಾಯಕ ಕಂದಾಯಾಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಕಾರ್ಯನಿರ್ವಹಿಸಲು ಅಧಿಕಾರ ಪ್ರತ್ಯಾಯೋಜಿಸಿದ್ದು, ಜಂಟಿ ಆಯುಕ್ತರು ಸ್ಥಿರೀಕರಣ ಆದೇಶ ಹೊರಡಿಸಿರುವ ಪ್ರಕರಣಗಳಿಗೆ ಕಟ್ಟಡ ಕಾಮಗಾರಿಯನ್ನು ಮುಂದುವರೆಯದಂತೆ ನಿಯಂತ್ರಿಸಲು ಹಾಗೂ ಅನಧಿಕೃತ ಅಂತಸ್ತುಗಳನ್ನು ಸೀಲ್ ಮಾಡಲು ಸಂಬಂಧಪಟ್ಟ ಉಪವಿಭಾಗದ ಸಹಾಯಕ ಕಂದಾಯಾಧಿಕಾರಿ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಆದೇಶ ಹೊರಡಿಸತಕ್ಕದ್ದು. ಸೀಲ್ ಮಾಡಿರುವ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು/ ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಮತ್ತು ಸಹಾಯಕ ಕಂದಾಯಾಧಿಕಾರಿ ರವರಿಗೆ Geo-tag ಛಾಯಚಿತ್ರಗಳನ್ನು ಒಳಗೊಂಡಂತೆ ವರದಿಯನ್ನು ಜಂಟಿ ಆಯುಕ್ತರು ರವರಿಗೆ ಸಲ್ಲಿಸತಕ್ಕದ್ದು. ಈ ಪ್ರಕ್ರಿಯೆಯಲ್ಲಿ

ಸಂಬಂಧಪಟ್ಟ ಸಹಾಯಕ ನಿರ್ದೇಶಕರು ಅಗತ್ಯವಿದ್ದಲ್ಲಿ ಸದರಿಯವರುಗಳಿಗೆ ಅಗತ್ಯ ಸಹಕಾರ ನೀಡುವುದು.

(ix) ಉಲ್ಲೇಖ (2) ರ ಘನ ಸರ್ವೋಚ್ಚ ನ್ಯಾಯಾಲಯದ ಆದೇಶದ ನಿರ್ದೇಶನಗಳ ಸಂಖ್ಯೆ 21(iv) ಮತ್ತು(viii) ರಲ್ಲಿ ಉದ್ದೇಶಿತ/ನಿರ್ಮಾಣವಾಗುವ ಕಟ್ಟಡಗಳಿಗೆ ಸೇವಾ ಸಂಪರ್ಕಗಳನ್ನು ಒದಗಿಸುವ ಸಂಬಂಧ ಬೆಸ್ಕಾಂ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ದಿನಾಂಕ:09-01-2025 ರಂದು ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರಿಂದ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಆದ್ದರಿಂದ ಪಾಲಿಕೆಯಿಂದ ಯಾವುದೇ ಕಟ್ಟಡಕ್ಕೆ ಬಿಬಿಎಂಪಿ ಕಾಯ್ದೆ 2020ರ ಕಲಂ 248 ರಡಿಯಲ್ಲಿ ಆದೇಶ ಹೊರಡಿಸಿರುವ ಪ್ರಕರಣಗಳಲ್ಲಿ ಹಾಗೂ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 ರ ಕಲಂ 243(3)(e) ಆದೇಶ ನೀಡಿದ ತಕ್ಷಣ ಸದರಿ ಕಟ್ಟಡಕ್ಕೆ/ನಿವೇಶನಕ್ಕೆ ಒದಗಿಸಿದ ತಾತ್ಕಾಲಿಕ/ಶಾಶ್ವತ ಸೇವಾ ಸಂಪರ್ಕವನ್ನು ಕಡಿತ/ಸ್ಥಗಿತಗೊಳಿಸುವಂತೆ ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ಬೆಸ್ಕಾಂ ಮತ್ತು ಬಿ.ಡಬ್ಲ್ಯು.ಎಸ್.ಎಸ್.ಬಿಗೆ ಕೋರುವುದು.

8) <u>ಕಾಯ್ದೆಯ ಕಲಂ 244(2) ರಂತೆ ಉಲ್ಲಂಘನೆ/ಕಟ್ಟಡ ತೆರವುಗೊಳಿಸಲು ಕ್ರಮವಹಿಸುವುದು:</u>

(i) ಉಲ್ಲೇಖ (6) ರ ಆದೇಶದಲ್ಲಿ ಒಂದು ಅನುಷ್ಠಾನ ಕಾರ್ಯಪಡೆ ರಚಿಸಲಾಗಿದೆ. ಸದರಿ ಅನುಷ್ಠಾನ ಕಾರ್ಯಪಡೆಗೆ ಕಾಯ್ದೆಯ ಕಲಂ 244(2) ರಂತೆ ಉಲ್ಲಂಘನೆ/ಅನಧಿಕೃತ ಕಟ್ಟಡ ತೆರವುಗೊಳಿಸಲು ಉಲ್ಲೇಖ (3)ರಲ್ಲಿ ಅಧಿಕಾರ ಪ್ರತ್ಯಾಯೋಜಿಸಿ ಆದೇಶ ಹೊರಡಿಸಲಾಗಿದೆ.

(ii) ಸ್ಥಿರೀಕರಣ ಆದೇಶದಲ್ಲಿ ನಿಗಧಿಪಡಿಸಿದ ಕಾಲಮಿತಿಯೊಳಗೆ ಕಾಯ್ದೆಯ ಕಲಂ 246(2) ರಂತೆ ಕಟ್ಟಡದ ಮಾಲೀಕರು/ನಿರ್ಮಾಣದಾರರು ಅನಧಿಕೃತ ಕಟ್ಟಡವನ್ನು/ವ್ಯತಿರಿಕ್ತ ಭಾಗವನ್ನು ತೆರವುಗೊಳಿಸದಿದ್ದಲ್ಲಿ ಕಾಯ್ದೆಯ ಕಲಂ 244(2) ಅಡಿಯಲ್ಲಿ ಅವುಗಳನ್ನು ತೆರವುಗೊಳಿಸುವ ಕ್ರಮವನ್ನು ಜಂಟಿ ಆಯುಕ್ತರ ಅಧ್ಯಕ್ಷತೆಯ ಕಾರ್ಯಪಡೆಯ ಮೂಲಕ ಜಾರಿಗೊಳಿಸುವುದು.

(iii) ಕಾಯ್ದೆಯ ಕಲಂ 243(3)(ಸಿ) ರಲ್ಲಿನ ಅವಕಾಶದಂತೆ ಮಾಲೀಕರು/ನಿರ್ಮಾಣದಾರರು ನಿರ್ಮಾಣ ಮಾಡುತ್ತಿರುವ ಅನಧಿಕೃತ ಕಟ್ಟಡವನ್ನು / ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು ಕಾರ್ಯವ್ಯಾಪ್ತಿಯ ಸಹಾಯಕ ನಿರ್ದೇಶಕರು ರವರೊಂದಿಗೆ ಗುರುತು ಮಾಡುವುದು.

(iv) ಜಿಬಿಎ ಕಾಯ್ದೆ ಕಲಂ 244(2) ರಡಿಯಲ್ಲಿ ನೀಡಿದ ಆದೇಶವನ್ನೇ ಉಲ್ಲಂಘಿತ ಭಾಗಗಳನ್ನು ತೆರವುಗೊಳಿಸಲು ಅಂದಾಜು ಪಟ್ಟಿಗೆ ಜಂಟಿ ಆಯುಕ್ತರು ನೀಡಿದ ಆದೇಶ ಎಂದು ಪರಿಗಣಿಸಿ, ವಿಭಾಗ ಕಾರ್ಯಪಾಲಕ ಅಭಿಯಂತರರು ದರಪಟ್ಟಿಗಳ ಅನುಸಾರ ಅನಧಿಕೃತ ಕಟ್ಟಡ ನಿರ್ಮಾಣಗಳನ್ನು/ಉಲ್ಲಂಘನೆಗಳನ್ನು ತೆರವುಗೊಳಿಸಲು ಅಂತಸ್ತುವಾರು ಪ್ರತಿ ಚ.ಮೀ ಗೆ ತಗಲುವ ಮಾದರಿ ವೆಚ್ಚವನ್ನು ಸಿದ್ಧಪಡಿಸಿಕೊಂಡು ಅವುಗಳಿಗೆ ಆಯುಕ್ತರು ರವರಿಂದ ಅನುಮೋದನೆ ಪಡೆದುಕೊಳ್ಳತಕ್ಕದ್ದು. ಹಾಗೆಯೇ ಪ್ರತಿ ವಿಭಾಗವಾರು/ವಲಯವಾರು ಅನಧಿಕೃತ ಕಟ್ಟಡ ತೆರವು ಕಾರ್ಯಚರಣೆಗಾಗಿ ಪ್ರತಿ ಸಾಲಿಗೆ ಅನ್ವಯಿಸುವಂತೆ ಅರ್ಹ ಏಜೆನ್ಸಿಯನ್ನು ಅಭಿಯಂತರರು ನೇಮಕ ಮಾಡಿಕೊಳ್ಳುವುದು, ಈ ಸಂಬಂಧ ಅಧಿಕಾರ ನೀಡಲು/ ಪಡೆಯಲು ಪ್ರತ್ಯಾಯೋಜನೆ ಆದೇಶಗಳಂತೆ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮತಿಗೆ ಕ್ರಮ ವಹಿಸುವುದು.

(v) ಜಿಬಿಎ ಕಾಯ್ದೆ ಕಲಂ 243, 244 & 250 ರಂತೆ ಅನಧಿಕೃತ/ಉಲ್ಲಂಘಿತ ಕಟ್ಟಡದ ಭಾಗಗಳನ್ನು ತೆರವುಗೊಳಿಸಲು ಜಾರಿಗೊಳಿಸಿದ ತಾತ್ಕಾಲಿಕ & ಸ್ಥಿರೀಕರಣ ಆದೇಶಗಳಿಗೆ ಸಕ್ಷಮ ಮೇಲ್ಮನವಿ ಪ್ರಾಧಿಕಾರ/ನ್ಯಾಯ ಮಂಡಳಿ ಅಥವಾ ಇನ್ಯಾವುದೇ ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ನೀಡದಿರುವ ಬಗ್ಗೆ ಪರಿಶೀಲಿಸಿಕೊಂಡು ನಂತರ ಸ್ಥಿರೀಕರಣ ಆದೇಶದಂತೆ ಕಟ್ಟಡವನ್ನು/ವ್ಯತಿರಿಕ್ತ ಭಾಗವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು.

(vi) ಅನಧಿಕೃತ/ಉಲ್ಲಂಘಿತ ಕಟ್ಟಡದ ಭಾಗಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ತೆರವು ಕಾರ್ಯಚರಣೆಯ ದಿನಾಂಕವನ್ನು ನಿಗಧಿಪಡಿಸಲು ಜಂಟಿ ಆಯುಕ್ತರು ರವರ ಅನುಮೋದನೆಗೆ ಸಲ್ಲಿಸುವುದು. ಜಂಟಿ ಆಯುಕ್ತರು ರವರು ಕಾರ್ಯಪಡೆ ಅಧ್ಯಕ್ಷರಾಗಿದ್ದು, ಅವರುಗಳು

ದಿನಾಂಕ ನಿಗಧಿಪಡಿಸುವುದು. ಕಾರ್ಯಪಡೆ ಎಲ್ಲಾ ಸದಸ್ಯರುಗಳಿಗೆ ಅಗತ್ಯ ಕ್ರಮಕ್ಕೆ ಪೂರ್ವಸಿದ್ಧತೆ ಮಾಡಿಕೊಳ್ಳಲು ತಿಳಿಸುವುದು.

(vii) ಅನಧಿಕೃತ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ಕಟ್ಟಡದಲ್ಲಿ ವಾಸಿಸುವ ನಿವಾಸಿಗಳಿಗೆ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು 15 ದಿನಗಳ ಪೂರ್ವ ಸೂಚನೆ ನೀಡಲು ಹಾಗೂ ಸಂಬಂಧಪಟ್ಟ ಪೋಲೀಸ್ ಠಾಣೆಗೆ ಅಗತ್ಯ ಭದ್ರತೆಗಾಗಿ ಮನವಿ ಸಲ್ಲಿಸುವುದು.

(viii) ನಿಗಧಿತ ದಿನಾಂಕದಂದು ಕಟ್ಟಡದ ವ್ಯತಿರಿಕ್ತ ಭಾಗಗಳನ್ನು /ಅನಧಿಕೃತ ಕಟ್ಟಡ ತೆರವುಗೊಳಿಸುವ ಕಾರ್ಯವನ್ನು ಜಂಟಿ ಆಯುಕ್ತರ ಮೇಲ್ವಿಚಾರಣೆಯಲ್ಲಿ ಕಾರ್ಯಪಡೆ ಸದಸ್ಯರು ಹಾಜರಿದ್ದು ತೆರವುಗೊಳಿಸುವ ಕಾರ್ಯಚರಣೆಯಲ್ಲಿ ಕಾರ್ಯ ನಿರ್ವಹಿಸತಕ್ಕದ್ದು.

(ix) ಉಲ್ಲೇಖ (2) ರ ಘನ ಸರ್ವೋಚ್ಛ ನ್ಯಾಯಾಲಯದ ಆದೇಶ ಕ್ರಮ ಸಂಖ್ಯೆ: IX. 91. D(iii) ರಲ್ಲಿ ತಿಳಿಸಿರುವಂತೆ ಕಟ್ಟಡವನ್ನು ತೆರವುಗೊಳಿಸುವ ಮುನ್ನ ಇಬ್ಬರು ಪಂಚರಿಂದ ಸಹಿ ಪಡೆದು ಸ್ಥಳ ಮಹಜರ್ ಸಿದ್ದಪಡಿಸಿಕೊಳ್ಳುವುದು.

(x) ಉಲ್ಲೇಖ (2) ರ ಘನ ಸರ್ವೋಚ್ಛ ನ್ಯಾಯಾಲಯದ ಆದೇಶ ಕ್ರಮ ಸಂಖ್ಯೆ: IX. 91.E(i) ರಂತೆ ತೆರವು ಕಾರ್ಯಚರಣೆಯನ್ನು ವಿಡಿಯೋ ರೆಕಾರ್ಡಿಂಗ್ ಮಾಡುವುದು. ಸದರಿ ವಿಡಿಯೋ ರೆಕಾರ್ಡಿಂಗ್ ಅನ್ನು ಜಂಟಿ ಆಯುಕ್ತರಿಗೆ ಸಲ್ಲಿಸುವುದು. ಜಂಟಿ ಆಯುಕ್ತರು/ ಉಪ ನಿರ್ದೇಶಕರ ನೆರವಿನೊಂದಿಗೆ ಕಟ್ಟಡ ಪರವಾನಗಿ ನೀಡಲಾಗುತ್ತಿರುವ ಇ.ಓ.ಡಿ.ಬಿ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲು ಕ್ರಮ ವಹಿಸುವುದು.

(xi) ಜಿ.ಬಿ.ಜಿ ಕಾಯ್ದೆ ಕಲಂ 246 (2) ರಂತೆ ಖಾತೆದಾರರು/ ಅಭಿವೃದ್ಧಿದಾರರು ಅನಧಿಕೃತ ಕಟ್ಟಡವನ್ನು / ಕಟ್ಟಡದ ಉಲ್ಲಂಘಿತ ಭಾಗಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳದಿದ್ದಲ್ಲಿ ಗುತ್ತಿಗೆದಾರರಿಗೆ ಪಾವತಿಸಲಾದ ವೆಚ್ಚವನ್ನು ಸಂಬಂಧಪಟ್ಟ ಖಾತೆದಾರರ/ಮಾಲೀಕರು ಆಸ್ತಿ ತೆರಿಗೆ ಬಾಕಿಯಾಗಿ ವಸೂಲಿ ಮಾಡಲು ಜಂಟಿ ಆಯುಕ್ತರು ರವರು ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ನಿರ್ದೇಶನ ನೀಡುವುದು.

ಈ ಮೇಲೆ ವಿವರಿಸಿರುವ ಕಾರ್ಯವಿಧಾನವನ್ನು ಅನುಸರಿಸುವಾಗ ನಕ್ಷೆ ಉಲ್ಲಂಘನೆ ಮಾಡಿ/ಅನಧಿಕೃತವಾಗಿ ನಿರ್ಮಾಣ ಮಾಡಿರುವ ಕಟ್ಟಡದ ವಿರುದ್ಧ ಜಿ.ಬಿ.ಜಿ ಕಾಯ್ದೆ 2024 ಕಲಂ 243 (3)(c)(d)(e) ಹಾಗೂ 244 (2) ರಂತೆ ಕ್ರಮಜರುಗಿಸಿರುವ ಬಗ್ಗೆ ಸಂಬಂಧಪಟ್ಟ ಜಂಟಿ ಆಯುಕ್ತರು ರವರ ಕಛೇರಿಯಲ್ಲಿ ಕ್ರಮ ಸಂಖ್ಯೆ: 2(ii) ರಲ್ಲಿ ತಿಳಿಸಿರುವಂತೆ ವಹಿಯನ್ನು ನಿರ್ವಹಿಸುವುದು.

9. **ಘನ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ: 14604/2024, ಎಸ್.ಎಲ್.ಪಿ(ಸಿ) ಸಂಖ್ಯೆ: 36440/2014 ರಲ್ಲಿ ನೀಡಿರುವ ಆದೇಶ ದಿನಾಂಕ: 17.12.2024 ರಂದು ಹಾಗೂ ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 295/2022, ರಲ್ಲಿ ನೀಡಿರುವ ಆದೇಶ ದಿನಾಂಕ: 13.11.2024 ಮತ್ತು ಇನ್ನಿತರೆ ಸಂಬಂಧಿಸಿದ ಅರ್ಜಿಯಲ್ಲಿ ಅನಧಿಕೃತ/ಉಲ್ಲಂಘನೆಗಳನ್ನು ಒಳಗೊಂಡ ನಿರ್ಮಾಣಗಳ ವಿರುದ್ಧ ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಪಾಲಿಸಬೇಕಾದ ಅಗತ್ಯ ಕ್ರಮಗಳನ್ನು ಅಳವಡಿಸಿಕೊಳ್ಳುವ ಕುರಿತು.**

a. ಘನ ಸರ್ವೋಚ್ಛ ನ್ಯಾಯಾಲಯದ ಆದೇಶದ ಕಂಡಿಕೆ IX. 91. A.vi ರಂತೆ ಹಿಂದಿನ ದಿನಾಂಕದಲ್ಲಿ ನೋಟಿಸ್ ನೀಡುವುದನ್ನು ತಡೆಯಲು ಕೆಲವು ಕ್ರಮಗಳನ್ನು ಅನುಸರಿಸಲು ಆದೇಶಿಸಲಾಗಿದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಎಲ್ಲಾ ಕಟ್ಟಡ ನಿರ್ಮಾಣ ಅನುಮತಿಗಳನ್ನು OBPS/BPAMS ಆನ್‌ಲೈನ್ ತಂತ್ರಾಂಶದಡಿಯಲ್ಲಿ ಮಂಜೂರಾತಿ ನೀಡಲಾಗುತ್ತಿದೆ. ಸದರಿ OBPS ತಂತ್ರಾಂಶದಲ್ಲಿ ಒಂದು ಪೋರ್ಟಲ್ ಅನ್ನು ಸಿದ್ದಪಡಿಸಿದ್ದು ಕಾಯ್ದೆಯ 243(3)(d) & (e) ರಡಿಯಲ್ಲಿ ನೀಡಿದ ಆದೇಶ ಮತ್ತು ನೋಟಿಸ್‌ಗಳನ್ನು ತಕ್ಷಣ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು.

b. ನಕ್ಷೆ ಮಂಜೂರಾತಿ ಪಡೆದು ನಿರ್ಮಿಸುತ್ತಿರುವ ಕಟ್ಟಡಗಳ ನಿರ್ಮಾಣವನ್ನು ಮಂಜೂರಾತಿ ನಕ್ಷೆಗೆ ಅನುಗುಣವಾಗಿ ಕೈಗೊಂಡಿರುವ ಬಗ್ಗೆ ಸಂಬಂಧಪಟ್ಟ ವಲಯ ಕಚೇರಿ ಮತ್ತು ಕೇಂದ್ರ ಕಚೇರಿಯ ನಗರ ಯೋಜಕರು/ಸಹಾಯಕ ಅಭಿಯಂತರರು ಹಾಗೂ ನಗರ ಯೋಜನಾ ಸಹಾಯಕ ನಿರ್ದೇಶಕರು ಕಾಲಕಾಲಕ್ಕೆ ಪರಿವೀಕ್ಷಿಸಿ ಪ್ಲಿಂತ್ ಪ್ರಮಾಣ ಪತ್ರ ಪಡೆಯುವ ಹಂತದವರೆಗೆ

ಉಲ್ಲಂಘನೆಗಳಾಗದಂತೆ ನಿಗಾವಹಿಸತಕ್ಕದ್ದು, ಸಂಬಂಧಪಟ್ಟ ಜಂಟಿ ನಿರ್ದೇಶಕರು ಈ ಪ್ರಕ್ರಿಯೆ ಸರಿಯಾಗಿ ನಡೆಯುತ್ತಿರುವ ಬಗ್ಗೆ ಗಮನ ಹರಿಸಿ ಅಗತ್ಯ ಸೂಚನೆಗಳನ್ನು ನೀಡತಕ್ಕದ್ದು.

c. ಒಂದು ವೇಳೆ ಪ್ಲಿಂತ್ ಹಂತದವರೆಗಿನ ನಿರ್ಮಾಣವು ಮಂಜೂರಾತಿ ನಕ್ಷೆ ಉಲ್ಲಂಘಿಸಿ ಕೈಗೊಂಡಿದ್ದಲ್ಲಿ ಅಂತಹ ಉಲ್ಲಂಘನೆಗಳ ವಿರುದ್ಧ ಕ್ರಮ ಕೈಗೊಳ್ಳಲು ಸಹಾಯಕ ನಿರ್ದೇಶಕರು ವರದಿಯನ್ನು ಸಿದ್ಧಪಡಿಸಿ ವಾರ್ಡ್ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಕಳುಹಿಸತಕ್ಕದ್ದು. ತಪ್ಪಿದಲ್ಲಿ ಕಟ್ಟಡ ಉಲ್ಲಂಘನೆಗೆ ನಗರ ಯೋಜಕರು/ಸಹಾಯಕ ಅಭಿಯಂತರರು ಹಾಗೂ ನಗರ ಯೋಜನಾ ಸಹಾಯಕ ನಿರ್ದೇಶಕರು ಹೊಣೆಗಾರರಾಗಿರುತ್ತಾರೆ.

d. ನಿರ್ಮಾಣದಾರರು/ಮಾಲೀಕರು ಸ್ವತ್ತಿಗೆ ಸಂಬಂಧಿಸಿದಂತೆ ಪಾಲಿಕೆ ವತಿಯಿಂದ ಅಗತ್ಯ ಮಂಜೂರಾತಿ/ಪರವಾನಗಿ ಪಡೆದು ಅದರಂತೆ ಕಟ್ಟಡ ನಿರ್ಮಾಣ ಕೈಗೊಂಡು ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆದ ನಂತರವಷ್ಟೆ ಹಂಚಿಕೆದಾರರಿಗೆ/ ಖರೀದಿದಾರರಿಗೆ ಕಟ್ಟಡ/ಘಟಕಗಳನ್ನು ವರ್ಗಾಯಿಸುವುದಾಗಿ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗಿರುತ್ತದೆ. ಇದರಂತೆ ನಕ್ಷೆ ಮಂಜೂರಾತಿ ಸಂದರ್ಭದಲ್ಲಿ ಪ್ರಮಾಣ ಪತ್ರ ಪಡೆದು ನಕ್ಷೆ ಮಂಜೂರಾತಿ ನೀಡುವುದು.

e. ನಿರ್ಮಾಣದಾರರು/ಮಾಲೀಕರು ಸ್ವತ್ತಿಗೆ ಸಂಬಂಧಿಸಿದಂತೆ ಪಾಲಿಕೆ ವತಿಯಿಂದ ಮಂಜೂರಾದ ನಕ್ಷೆ/ಪರವಾನಿಗೆಯಂತೆ ಪ್ಲಿಂತ್ ಹಂತದವರೆಗೆ ಕಟ್ಟಡ ನಿರ್ಮಾಣವಾಗುತ್ತಿರುವ ಬಗ್ಗೆ ಆಯಾ ವಲಯಗಳ ಕಾರ್ಯವ್ಯಾಪ್ತಿಗೆ ಸಂಬಂಧಪಟ್ಟ ನಗರ ಯೋಜಕರು, ಹಾಗೂ ಸಹಾಯಕ ನಿರ್ದೇಶಕರು ಪ್ರತಿ ಎರಡು ತಿಂಗಳಿಗೊಮ್ಮೆ ಸ್ಥಳ ಪರಿಶೀಲನಾ ಕೈಗೊಂಡು ವರದಿಯನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು. ಮಂಜೂರಾತಿ ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಾಣಗೊಂಡಿದ್ದಲ್ಲಿ ಅಂತಹ ಉಲ್ಲಂಘನೆಗಳ ವಿರುದ್ಧ ಆಯಾ ಉಪವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ ವರದಿ/ಮಾಹಿತಿ ಕಳುಹಿಸತಕ್ಕದ್ದು.

f. ಘನ ಸರ್ವೋಚ್ಛ ನ್ಯಾಯಾಲಯದ ಆದೇಶದ ಹಿನ್ನಲೆಯಲ್ಲಿ ಪಾಲಿಕೆಯಿಂದ ಮಂಜೂರಾದ ನಕ್ಷೆಯಂತೆ ಅಥವಾ ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಬಗ್ಗೆ ಕಾಲಕಾಲಕ್ಕೆ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಈ ಕೆಳಕಂಡಂತೆ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ನಿಗಧಿಪಡಿಸಲಾಗಿದೆ.

| ನಕ್ಷೆ ಮಂಜೂರಾತಿ ಪಡೆದು ನಿರ್ಮಿಸುವಂತಹ ಕಟ್ಟಡಗಳು | | ಅನಧಿಕೃತವಾಗಿ ನಿರ್ಮಿಸುವಂತಹ ಕಟ್ಟಡಗಳು ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆದ ನಂತರ ಹೆಚ್ಚುವರಿಯಾಗಿ ನಿರ್ಮಾಣ ಮಾಡುವ ಕಟ್ಟಡಗಳು | |
|---|---|---|---|
| ತಪಾಸಣೆ ಮಾಡುವ ಅಧಿಕಾರಿ | ತಪಾಸಣೆ ಅಂಗೀಕರಿಸಬೇಕಾದ ಅಧಿಕಾರಿ | ತಪಾಸಣೆ ಮಾಡುವ ಅಧಿಕಾರಿ | ತಪಾಸಣೆ ಅಂಗೀಕರಿಸಬೇಕಾದ ಅಧಿಕಾರಿ |
| ನಗರ ಯೋಜಕರು ಮತ್ತು ಸಹಾಯಕ ನಿರ್ದೇಶಕರು | ಜಂಟಿ ನಿರ್ದೇಶಕರು (ಕೇಂದ್ರ ಕಚೇರಿ ವ್ಯಾಪ್ತಿಯಲ್ಲಿ) ಮತ್ತು ಉಪ ನಿರ್ದೇಶಕರು, ನಗರ ಯೋಜನೆ (ವಲಯ ಕಚೇರಿಯ ವ್ಯಾಪ್ತಿಯಲ್ಲಿ) | ಸಂಬಂಧಪಟ್ಟ ವಾರ್ಡ್ ಕಾರ್ಯವ್ಯಾಪ್ತಿಯ ಸಹಾಯಕ ಅಭಿಯಂತರರು & ಸಹಾಯಕ ಕಾರ್ಯಪಾಲಕ ಅಭಿಯಂತರರು | ಸಂಬಂಧಪಟ್ಟ ವಿಭಾಗದ ಕಾರ್ಯಪಾಲಕ ಅಭಿಯಂತರರು |

ಷರಾ:

1. ಕಟ್ಟಡ ತಪಾಸಣೆಯನ್ನು ಜನವರಿ, ಮಾರ್ಚ್, ಮೇ, ಜುಲೈ, ಸೆಪ್ಟಂಬರ್, ನವಂಬರ್ ಮಾಸಿಕದ ಪ್ರಥಮಾರ್ಧದಲ್ಲಿ ಕೈಗೊಳ್ಳುವುದು.
2. ಜಂಟಿ ನಿರ್ದೇಶಕರು ನಗರ ಯೋಜನೆ /ಉಪ ನಿರ್ದೇಶಕರು–ನಗರ ಯೋಜನೆ ರವರು ತಪಾಸಣೆಯನ್ನು ಕಾಲಕಾಲಕ್ಕೆ ಕೈಗೊಂಡು ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವ ಕಾರ್ಯದ ಮೇಲ್ವಿಚಾರಣೆ ಕೈಗೊಳ್ಳುವುದು.

g. ಇದೇ ರೀತಿ ಅನಧಿಕೃತವಾಗಿ ನಿರ್ಮಾಣವಾಗುವ ಕಟ್ಟಡಗಳ ಪರಿಶೀಲನೆಯನ್ನು ಆಯಾ ವಾರ್ಡ್‌ನ ಸಹಾಯಕ ಅಭಿಯಂತರರು & ಸಹಾಯಕ ಕಾರ್ಯಪಾಲಕ ಅಭಿಯಂತರರು ಪರಿಶೀಲಿಸಿ ಕ್ರಮ ಜರುಗಿಸುವುದು. ಆ ನಂತರ ಸಹಾಯಕ ಅಭಿಯಂತರರು & ಸಹಾಯಕ ಕಾರ್ಯಪಾಲಕ

ಅಭಿಯಂತರರು ಕಾಯ್ದೆಯ ಕಲಂ 243 ರಂತೆ ಉಲ್ಲಂಘನೆಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸುವುದು.

h. ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆದ ನಂತರ ಹೆಚ್ಚುವರಿ ನಿರ್ಮಾಣ/ಉಲ್ಲಂಘನೆಗಳು ಕಂಡು ಬಂದಲ್ಲಿ ಆಯಾ ವಾರ್ಡ್‌ನ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಹಾಗೂ ಸಹಾಯಕ ಅಭಿಯಂತರರು ಉಲ್ಲಂಘನೆಗಳ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ವರದಿ ಸಲ್ಲಿಸತಕ್ಕದ್ದು. ಆ ನಂತರ ಅಂತಹ ಅನಧಿಕೃತ ನಿರ್ಮಾಣದ ವಿರುದ್ಧ ಕಾನೂನು ಅವಕಾಶಗಳಂತೆ ಸೂಕ್ತ ಕ್ರಮ ಜರುಗಿಸುವುದು.

10. <u>ಬಿಬಿಎಂಪಿ ಕಾಯ್ದೆ 2020 ರಡಿಯಲ್ಲಿ ಈಗಾಗಲೇ ಕ್ರಮ ಕೈಗೊಂಡಿರುವ ಪ್ರಕರಣಗಳಿಗೆ ಸಂಬಂಧಪಟ್ಟಂತೆ, ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯ ತತ್ಸಮಾನ ಕಲಂಗಳಡಿಯಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳುವ ಬಗ್ಗೆ.</u>

(i) ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024 ಜಾರಿ ಪೂರ್ವದಲ್ಲಿ ಬಿಬಿಎಂಪಿ ಕಾಯ್ದೆ 2020 ರಡಿಯಲ್ಲಿ ಈಗಾಗಲೇ ಕ್ರಮ ಕೈಗೊಂಡಿರುವ ಪ್ರಕರಣಗಳಲ್ಲಿ ಅದು ಯಾವ ಹಂತದವರೆಗೆ ಬಿಬಿಎಂಪಿ ಕಾಯ್ದೆ 2020 ರಡಿಯಲ್ಲಿ ಕ್ರಮ ಕೈಗೊಳ್ಳಲಾಗಿದೆಯೇ ಅದರಂತೆ ಮುಂದುವರೆದ ಕ್ರಮಗಳನ್ನು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024ರ ತತ್ಸಮಾನ ಕಲಂಗಳ ಅಡಿಯಲ್ಲಿ ಈ ಆದೇಶದ ಕಾರ್ಯವಿಧಾನ ಹಾಗೂ ಜವಾಬ್ದಾರಿಗಳಂತೆ ಮತ್ತು ಉಲ್ಲೇಖ (3)ರ ಅಧಿಕಾರಿ ಪ್ರತ್ಯಾಯೋಜನೆಯ ಆದೇಶದಂತೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ನಿಯಮಾನುಸಾರ ಮುಂದುವರೆದ ಕ್ರಮಗಳನ್ನು ಕೈಗೊಳ್ಳುವುದು.

(ii) ಈ ಆದೇಶ ಜಾರಿಯಾಗುವ ಪೂರ್ವದಲ್ಲಿ ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರಿಂದ ಹೊರಡಿಸಲಾದ ಕಛೇರಿ ಆದೇಶಗಳಲ್ಲಿ ವಿವರಿಸಿರುವ ಮಾರ್ಗಸೂಚಿ ಹಾಗೂ ಅಧಿಕಾರ ಪ್ರತ್ಯಾಯೋಜನೆ ಆದೇಶಗಳಂತೆ ಮಂಜೂರಾತಿ ನಕ್ಷೆ ಉಲ್ಲಂಘನೆ ಮತ್ತು ಅನಧಿಕೃತ ಕಟ್ಟಡ ನಿರ್ಮಾಣಗಳಿಗೆ ಈಗಾಗಲೇ ಬಿಬಿಎಂಪಿ ಕಾಯ್ದೆ 2020 ರ ಕಲಂ 248 (1), (2) ಮತ್ತು (3) ಹಾಗೂ 356(1) ಮತ್ತು (2) ರನ್ವಯ ನೀಡಿರುವ ಆದೇಶಗಳಿಗೆ ಬಾಧ್ಯಸ್ತಿಕೆ ಉಂಟಾಗುವುದಿಲ್ಲ.

ಈ ಮೇಲ್ಕಂಡ ಆದೇಶವನ್ನು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಅರ್ಥೈಸಿಕೊಂಡು, ಅನಧಿಕೃತ ಕಟ್ಟಡ /ಉಲ್ಲಂಘನೆ ನಿರ್ಮಾಣಗಳನ್ನು ತಡೆಯಲು ಮತ್ತು ತೆರವುಗೊಳಿಸುವ ದೃಷ್ಟಿಯಿಂದ ಅವರವರ ಜವಾಬ್ದಾರಿಯನ್ನು ಸಮರ್ಪಕವಾಗಿ ಕಾಲಮಿತಿಯೊಳಗೆ ನಿರ್ವಹಿಸುವುದು. ಒಂದು ವೇಳೆ ಅನಧಿಕೃತ ಕಟ್ಟಡ/ಕಟ್ಟಡದ ಉಲ್ಲಂಘನೆ ಭಾಗಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಲ್ಲಿ ನಿಗಧಿಪಡಿಸಿದ ಕರ್ತವ್ಯಗಳನ್ನು ನಿಗಧಿತ ಅವಧಿಯೊಳಗೆ ಪಾಲಿಸಲು ವಿಫಲರಾದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಜಿಬಿಎ ಕಾಯ್ದೆ – 2024 ರ ಕಲಂ 247 ಮತ್ತು ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಈ ಮೂಲಕ ಆದೇಶಿಸಿದೆ.

ಆಯುಕ್ತರು
ಬೆಂಗಳೂರು ಪೂರ್ವ ನಗರ ಪಾಲಿಕೆ

ಅಡಕ:

1. W.P.No: 6184/2015 ರ ಆದೇಶ ದಿನಾಂಕ: 10.03.2015
2. W.P.No: 20056/2019 ಆದೇಶ ದಿನಾಂಕ: 12.02.2024
3. W.P.(Civil No): 295/2022 ರ ಆದೇಶ ದಿನಾಂಕ: 13.11.2024
4. Civil Appeal no: 14604/2024, SLP(C) no: 36440/2014 dt: 17.12.2024

ಪ್ರತಿಯನ್ನು:

1) ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.

3) ವಿಶೇಷ ಆಯುಕ್ತರು (ಯೋಜನೆ)/(ಆಡಳಿತ)/(ಕಂದಾಯ) ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಮಾಹಿತಿಗಾಗಿ ಸಲ್ಲಿಸಿದೆ.
4) ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಮಾಹಿತಿಗಾಗಿ.
5) ಅಪರ ಮುಖ್ಯ ನಗರ ಯೋಜಕರು, ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಜಂಟಿ ಆಯುಕ್ತರುಗಳು, ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ಬೆಂಗಳೂರು ಪೂರ್ವ ನಗರ ಪಾಲಿಕೆ ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಮುಖ್ಯ ಅಭಿಯಂತರರು ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಸೂಕ್ತ ಕ್ರಮಕ್ಕಾಗಿ.
8) ಜಂಟಿ ನಿರ್ದೇಶಕರು-ನಗರ ಯೋಜನೆ ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
9) ಎಲ್ಲಾ ವಿಭಾಗಗಳ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ.
10) ಉಪ ಆಯುಕ್ತರು (ಆಡಳಿತ), ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ.
11) ಉಪ ನಿರ್ದೇಶಕರು, ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ನಗರ ಯೋಜನೆ ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಸೂಕ್ತ ಕ್ರಮಕ್ಕಾಗಿ.
12) ಎಲ್ಲಾ ಉಪ-ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ ಸಂಬಂಧಪಟ್ಟ ವಾರ್ಡ್‌ನ ಅಭಿಯಂತರರು ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಅಗತ್ಯ ನಿರ್ದೇಶನ ನೀಡುವಂತೆ ಸೂಚಿಸಿದೆ.
13) ಎಲ್ಲಾ ಕಂದಾಯಾಧಿಕಾರಿಗಳ ಹಾಗೂ ಸಹಾಯಕ ಕಂದಾಯಾಧಿಕಾರಿಗಳು ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
14) ಕಛೇರಿ ಪ್ರತಿ.

ಅನುಬಂಧ-3

ಗ್ರೇಟರ್ ಬೆಂಗಳೂರು ಪ್ರಾಧಿಕಾರ

# ಬೆಂಗಳೂರು ಪೂರ್ವ ನಗರ ಪಾಲಿಕೆ

ಆರ್.ಹೆಚ್.ಬಿ ಕಾಲೋನಿ, ಐಟಿಪಿಎಲ್ ಮುಖ್ಯ ರಸ್ತೆ, ಮಹದೇವಪುರ, ಬೆಂಗಳೂರು-560048

ಸಂಖ್ಯೆ: ಬೆಪೂನಪಾ/ಆ/ಪಿಆರ್/162/25-26

ದಿನಾಂಕ:21.11.2025

**ಸುತ್ತೋಲೆ**

ವಿಷಯ:- ನಗರ ಪಾಲಿಕೆಯಿಂದ ಮಂಜೂರಾದ ನಕ್ಷೆಗಳನ್ನು ಉಲ್ಲಂಘಿಸಿ ನಿರ್ಮಿಸುವ ಕಟ್ಟಡಗಳು ಮತ್ತು ಅನಧಿಕೃತ ಕಟ್ಟಡ ನಿರ್ಮಾಣಗಳನ್ನು ತಡೆಯುವ ಕುರಿತು ಮಾದರಿ ನೋಟೀಸ್‌ಗಳು.

ಉಲ್ಲೇಖ:-
1. ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ: ಬೆಪೂನಪಾ/ನಯೋ/ಪಿಆರ್/158/25-26, ದಿ:21.11.2025
2. ಕಚೇರಿ ಆದೇಶ ಸಂಖ್ಯೆ: ಬೆಪೂನಪಾ/ನಯೋ/ಪಿಆರ್/159/25-26 ದಿ:21.11.2025
3. ಕಚೇರಿ ಆದೇಶ ಸಂಖ್ಯೆ: ಬೆಪೂನಪಾ /ನಯೋ/ಪಿಆರ್/160/25-26 ದಿ:21.11.2025
4. ಕಚೇರಿ ಆದೇಶ ಸಂಖ್ಯೆ: ಬೆಪೂನಪಾ /ನಯೋ/ಪಿಆರ್/161/25-26 ದಿ:21.11.2025

* * * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಟ್ಟಡ ನಕ್ಷೆ ಮಂಜೂರಾತಿ ಪಡೆಯದೇ/ ಮಂಜೂರಾತಿ ನಕ್ಷೆ ಉಲ್ಲಂಘಿಸಿ ನಿರ್ಮಿಸುತ್ತಿರುವ ಕಟ್ಟಡಗಳನ್ನು ತೆರವುಗೊಳಿಸಲು ಉಲ್ಲೇಖ (1)ರ ಕಛೇರಿ ಆದೇಶದಲ್ಲಿ ಜಂಟಿ ಆಯುಕ್ತರುಗಳಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ. ಈ ಸಂಬಂಧ ಉಲ್ಲೇಖ (2) ರ ಕಛೇರಿ ಆದೇಶದಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ/ ಮಂಜೂರಾತಿ ನಕ್ಷೆ ಉಲ್ಲಂಘಿಸಿ ನಿರ್ಮಿಸುತ್ತಿರುವ ಕಟ್ಟಡದ ಭಾಗಗಳನ್ನು ತೆರವುಗೊಳಿಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ. ಉಲ್ಲೇಖ (3)ರ ಕಚೇರಿ ಆದೇಶದಲ್ಲಿ ಅನಧಿಕೃತ/ನಕ್ಷೆ ಮಂಜೂರಾತಿ ಪಡೆದು ಉಲ್ಲಂಘಿಸಿರುವ ಕಟ್ಟಡಗಳನ್ನು ತೆರವುಗೊಳಿಸಲು ಆವರ್ತ ನಿಧಿ ಒದಗಿಸಿ ಆದೇಶ ಹೊರಡಿಸಿದೆ.

ಮುಂದುವರೆದು, ಉಲ್ಲೇಖ (2) ಮತ್ತು (4)ರಲ್ಲಿ ಹೊರಡಿಸಿರುವ ಆದೇಶಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮತ್ತು ಶಾಖೆಗಳ ಮಧ್ಯೆ ಸಮನ್ವಯ ಸಾಧಿಸಲು ಉಲ್ಲೇಖ (4) ರ ಆದೇಶದಲ್ಲಿ ಸಮನ್ವಯ ಮತ್ತು ಮೇಲ್ವಿಚಾರಣಾ ಸಮಿತಿ ಮತ್ತು ಅನುಷ್ಠಾನ ಕಾರ್ಯಪಡೆ ರಚಿಸಿ ಆದೇಶ ರಚಿಸಿದೆ.

ಸದರಿ ಅನಧಿಕೃತ ಕಟ್ಟಡ ನಿರ್ಮಾಣ/ ಮಂಜೂರಾತಿ ನಕ್ಷೆ ಉಲ್ಲಂಘಿಸಿ ನಿರ್ಮಿಸುತ್ತಿರುವ ಕಟ್ಟಡದ ಭಾಗಗಳನ್ನು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 ರ ಅವಕಾಶಗಳಂತೆ ನಗರ ಪಾಲಿಕೆಯ ಎಲ್ಲಾ ಕೇಂದ್ರ/ವಲಯ ಕಛೇರಿಗಳಲ್ಲಿ ಏಕರೂಪದ ಕಾರ್ಯವಿಧಾನವನ್ನು ಅಳವಡಿಸಿಕೊಂಡು ನಿಯಮಾನುಸಾರ ಕ್ರಮ ಜರುಗಿಸಲು ಪೂರಕವಾಗಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 (ಜಿಬಿಜಿ ಕಾಯ್ದೆ 2024)ರ ಕಲಂ 243(3)(c)(d)(e) ಕಲಂ 244, ಕಲಂ 311 ಹಾಗೂ ಕಲಂ 312 ರಂತೆ ಅನಧಿಕೃತ ನಿರ್ಮಾಣದಾರರಿಗೆ ಜಾರಿಗೊಳಿಸಬೇಕಾದ ಆದೇಶ/ನೋಟೀಸ್‌ನ ಮಾದರಿ ನಮೂನೆಯನ್ನು ಇದರೊಂದಿಗೆ

ಅಡಕ ಮಾಡಿದೆ. ಈ ಹಿನ್ನಲೆಯಲ್ಲಿ ಅನಧಿಕೃತ ಕಟ್ಟಡಗಳು ಮತ್ತು ನಕ್ಷೆ ಉಲ್ಲಂಘಿಸಿ ಕಟ್ಟಡಗಳ ಪ್ರಕರಣಗಳ ವಿರುದ್ಧ ಪರಿಣಾಮಕಾರಿಯಾಗಿ ಜಿಬಿಜಿ ಕಾಯ್ದೆಯ ಅವಕಾಶಗಳಂತೆ ಕ್ರಮಜರುಗಿಸಲು ಸೂಚಿಸಿದೆ.

ಆಯುಕ್ತರು
ಬೆಂಗಳೂರು ಪೂರ್ವ ನಗರ ಪಾಲಿಕೆ

ಪ್ರತಿಯನ್ನು:

1) ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3) ವಿಶೇಷ ಆಯುಕ್ತರು (ಯೋಜನೆ)/(ಆಡಳಿತ)/(ಕಂದಾಯ) ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಮಾಹಿತಿಗಾಗಿ ಸಲ್ಲಿಸಿದೆ.
4) ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಮಾಹಿತಿಗಾಗಿ.
5) ಅಪರ ಮುಖ್ಯ ನಗರ ಯೋಜಕರು, ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಜಂಟಿ ಆಯುಕ್ತರುಗಳು, ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ಬೆಂಗಳೂರು ಪೂರ್ವ ನಗರ ಪಾಲಿಕೆ ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಮುಖ್ಯ ಅಭಿಯಂತರರು ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಸೂಕ್ತ ಕ್ರಮಕ್ಕಾಗಿ.
8) ಜಂಟಿ ನಿರ್ದೇಶಕರು-ನಗರ ಯೋಜನೆ ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
9) ಎಲ್ಲಾ ವಿಭಾಗಗಳ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ.
10) ಉಪ ಆಯುಕ್ತರು (ಆಡಳಿತ), ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ.
11) ಉಪ ನಿರ್ದೇಶಕರು-ನಗರ ಯೋಜನೆ ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಸೂಕ್ತ ಕ್ರಮಕ್ಕಾಗಿ.
12) ಎಲ್ಲಾ ಉಪ-ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ ಸಂಬಂಧಪಟ್ಟ ವಾರ್ಡ್‌ನ ಅಭಿಯಂತರರು ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಅಗತ್ಯ ನಿರ್ದೇಶನ ನೀಡುವಂತೆ ಸೂಚಿಸಿದೆ.
13) ಎಲ್ಲಾ ಕಂದಾಯಾಧಿಕಾರಿಗಳ ಹಾಗೂ ಸಹಾಯಕ ಕಂದಾಯಾಧಿಕಾರಿಗಳು ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
14) ಕಛೇರಿ ಪ್ರತಿ.

ಅನುಬಂಧ-4

ಗ್ರೇಟರ್ ಬೆಂಗಳೂರು ಪ್ರಾಧಿಕಾರ

# ಬೆಂಗಳೂರು ಪೂರ್ವ ನಗರ ಪಾಲಿಕೆ

ಆರ್.ಹೆಚ್.ಬಿ ಕಾಲೋನಿ, ಐಟಿಪಿಎಲ್ ಮುಖ್ಯ ರಸ್ತೆ, ಮಹದೇವಪುರ, ಬೆಂಗಳೂರು-560048

ಸಂಖ್ಯೆ: ಬೆಪೂನಪಾ/ಆ/ಪಿಆರ್/160/25-26 ದಿನಾಂಕ:21.11.2025

## ಕಛೇರಿ ಆದೇಶ

ವಿಷಯ: ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 (ಜಿಬಿಜಿ ಕಾಯ್ದೆ 2024) ರಡಿಯಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ/ಮಂಜೂರಾತಿ ಇಲ್ಲದೆ ಅನಧಿಕೃತವಾಗಿ ನಿರ್ಮಿಸಲಾದ ಕಟ್ಟಡದ ಭಾಗಗಳನ್ನು ಒಡೆದು ಹಾಕಲು ಕಾರ್ಯಪಾಲಕ ಅಭಿಯಂತರರಿಗೆ ಆವರ್ತ ನಿಧಿ (Revolving Fund) ಒದಗಿಸುವ ಬಗ್ಗೆ.

ಉಲ್ಲೇಖ: 1) ಈ ಕಚೇರಿ ಆದೇಶ ಸಂಖ್ಯೆ: ಬೆಪೂನಪಾ/ಆ/ಪಿಆರ್/158/25-26 ದಿ: 21.11.2025
2) ಈ ಕಚೇರಿ ಆದೇಶ ಸಂಖ್ಯೆ: ಬೆಪೂನಪಾ/ಆ/ಪಿಆರ್/159/25-26 ದಿ: 21.11.2025
3) ಈ ಕಚೇರಿ ಆದೇಶ ಸಂಖ್ಯೆ: ಬೆಪೂನಪಾ/ಆ/ಪಿಆರ್/161/25-26 ದಿ: 21.11.2025

* * * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿದ ಕಟ್ಟಡಗಳಿಗೆ ಜಿಬಿಜಿ ಕಾಯ್ದೆಯ ಕಲಂ 243 ರಡಿಯಲ್ಲಿ ನೋಟಿಸ್ ಜಾರಿಗೊಳಿಸಿ, ತದನಂತರ ಸದರಿ ನೋಟಿಸ್‌ಗಳಂತೆ ವಿಚಾರಣೆ ನಡೆಸಿ, ಸಮಜಾಯಿಷಿಯನ್ನು ಪರಿಶೀಲಿಸಿಕೊಂಡು ಅನಧಿಕೃತ ಕಟ್ಟಡವನ್ನು / ಕಟ್ಟಡದ ಉಲ್ಲಂಘನೆ ಭಾಗಗಳನ್ನು ತಮ್ಮ ಖರ್ಚಿನಲ್ಲಿ ತೆರವುಗೊಳಿಸಲು ತಪ್ಪಿದಲ್ಲಿ ಜಿಬಿಜಿ ಕಾಯ್ದೆ-2024 ಕಲಂ 244(2) ರಡಿಯಲ್ಲಿ ನಗರ ಪಾಲಿಕೆಯಿಂದಲೆ ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲಾಗುವುದೆಂದು ಸ್ಥಿರಿಕರಣ ಆದೇಶದಲ್ಲಿಯೇ ನಮೂದಿಸಿ ಕಾಯ್ದೆಯ ಕಲಂ 243(3)(e) ರೊಂದಿಗೆ ಕಲಂ 244(1) ರಡಿಯಲ್ಲಿ ಸ್ಥಿರೀಕರಣ ಆದೇಶವನ್ನು ಜಂಟಿ ಆಯುಕ್ತರು ಹೊರಡಿಸಬೇಕಾಗಿರುತ್ತದೆ.

ಕಟ್ಟಡದ ಮಾಲೀಕರು/ಸ್ವಾಧೀನದಾರರಿಗೆ ಸ್ಥಿರೀಕರಣ ಆದೇಶದಲ್ಲಿ ಸೂಚಿಸಿರುವ ಕಾಲಾಮಿತಿಯಲ್ಲಿ ತಮ್ಮ ಖರ್ಚಿನಲ್ಲಿ ಅನಧಿಕೃತ ಕಟ್ಟಡವನ್ನು / ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಬೇಕಾಗಿರುತ್ತದೆ. ಕಟ್ಟಡದ ಮಾಲೀಕರು ಯಾವುದೇ ಕ್ರಮ ಕೈಗೊಳ್ಳದೆ ಇದ್ದಲ್ಲಿ ಜಿಬಿಜಿ ಕಾಯ್ದೆ ಕಲಂ 244(2) ರಡಿಯಲ್ಲಿ ನಗರ ಪಾಲಿಕೆಯಿಂದ ವ್ಯತಿರಿಕ್ತ ಭಾಗವನ್ನು ತೆರವುಗೊಳಿಸಲು ಅವಕಾಶವಿರುತ್ತದೆ. ಅದಕ್ಕಾಗಿ ಆವರ್ತ ನಿಧಿ ಅವಶ್ಯಕತೆಯಿರುತ್ತದೆ. ಈ ಹಿನ್ನಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಲಾಗಿರುತ್ತದೆ.

## ಆದೇಶ

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಅನಧಿಕೃತ ಕಟ್ಟಡವನ್ನು /ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಲಾದ ಕಟ್ಟಡದ ಪೂರ್ಣ ಅಥವಾ ಭಾಗಶಃವನ್ನು ತೆರವುಗೊಳಿಸಲು ಈ ಕೆಳಕಂಡ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಆದೇಶಿಸಿದೆ.

- ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಸದರಿ ಕಾಯ್ದೆಯ ಸೆಕ್ಷನ್ 244(c) ಅಡಿಯಲ್ಲಿ ಅಂದಾಜುಗಳನ್ನು ಮಂಜೂರು ಮಾಡಿ ಕಾನೂನು ರೀತಿ ಆಯ್ಕೆಗೊಂಡಿರುವ ಗುತ್ತಿಗೆದಾರರಿಗೆ ಒಂದು ವಾರದೊಳಗಾಗಿ ಆದೇಶ ನೀಡತಕ್ಕದ್ದು.

- ಇದಕ್ಕೆ ತಗಲುವ ವೆಚ್ಚವನ್ನು ಭರಿಸುವ ಸಲುವಾಗಿ ಒತ್ತುವರಿ ತೆರವುಗೊಳಿಸಲು ರೂ.ಇಪ್ಪತ್ತೈದು (25) ಲಕ್ಷ ಅನುದಾನವನ್ನು ಒದಗಿಸಲಾಗಿದೆ. ಈ ಅನುದಾನವನ್ನು Encroachment Clearance Expenses ರಡಿಯಲ್ಲಿ ಭರಿಸತಕ್ಕದ್ದು.
- ಈ ಅನುದಾನವನ್ನು ಆಯಾ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಪಾಲಕ ಅಭಿಯಂತರರಿಗೆ ಹಂಚಿಕೆ ಮಾಡತಕ್ಕದ್ದು.
- ರೂ.10.00 ಲಕ್ಷಗಳವರೆಗಿನ ಅಂದಾಜುಪಟ್ಟಿಗೆ ಸಂಬಂಧಪಟ್ಟ ವಿಭಾಗದ ಕಾರ್ಯಪಾಲಕ ಅಭಿಯಂತರರು ರವರು ಆಡಳಿತಾತ್ಮಕ ಅನುಮೋದನೆ ನೀಡುವುದು ಹಾಗೂ ರೂ. ರೂ.10.00 ಲಕ್ಷಗಳು ಮೇಲ್ಪಟ್ಟ ಅಂದಾಜು ಪಟ್ಟಿಗೆ ಸಂಬಂಧಪಟ್ಟ ವಲಯದ ಜಂಟಿ ಆಯುಕ್ತರು ಆಡಳಿತಾತ್ಮಕ ಅನುಮೋದನೆ ನೀಡುವುದು.
- ತೆರವುಗೊಳಿಸುವ ಕಾಮಗಾರಿಯ ಅಂದಾಜಿಗೆ ಬಿಲ್ ಪಾವತಿ ಜಿಬಿಜಿ ಕಾಯ್ದೆ 2024ರ ನಿಯಮಗಳಂತೆ ಮಾಡತಕ್ಕದ್ದು.
- ಕಾರ್ಯಪಾಲಕ ಅಭಿಯಂತರರು ಆಯಾ ವಲಯದಲ್ಲಿ ನಿಯೋಜಿಸಲ್ಪಟ್ಟ ಗುತ್ತಿಗೆದಾರರಿಗೆ ಕಟ್ಟಡವನ್ನು ಒಡೆದು ಹಾಕಿದ 3 ದಿನಗಳಲ್ಲಿ ಬಿಲ್ಲುಗಳನ್ನು ಆಯಾ ವಲಯದ ಉಪ / ಸಹಾಯಕ ನಿಯಂತ್ರಕರು (ಹಣಕಾಸು) ರವರಿಗೆ ಜಂಟಿ ಆಯುಕ್ತರು ರವರ ಮುಖಾಂತರ ಡಿ.ಸಿ. ಬಿಲ್ಲು ಸಲ್ಲಿಸತಕ್ಕದ್ದು.
- ಈ ಅನುದಾನವನ್ನು ಒಂದು ಆವರ್ತ ನಿಧಿಯಾಗಿ (Revolving Fund) ಒದಗಿಸಲಾಗುವುದು. ಅನಧಿಕೃತ ಕಟ್ಟಡವನ್ನು / ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸುವ ಖರ್ಚನ್ನು ಮನೆ ಮಾಲೀಕರಿಂದ ವಸೂಲಿ ಮಾಡಬೇಕಾಗಿರುತ್ತದೆ. ಆ ದಿಕ್ಕಿನಲ್ಲಿ ಕಾರ್ಯಪಾಲಕ ಅಭಿಯಂತರರು ಗುತ್ತಿಗೆದಾರರಿಗೆ ಹಣ ಪಾವತಿಯೊಂದಿಗೆ ಸದರಿ ವೆಚ್ಚವನ್ನು ವಸೂಲಿ ಮಾಡಲು ವಲಯದ ಜಂಟಿ ಆಯುಕ್ತರಿಗೆ ಪತ್ರ ಬರೆಯತಕ್ಕದ್ದು ಹಾಗೂ ವಲಯದ ಜಂಟಿ ಆಯುಕ್ತರು ಆ ಹಣವನ್ನು ನಿಯಮಗಳಂತೆ ವಸೂಲಿ ಮಾಡಲು ಕ್ರಮ ಕೈಗೊಳ್ಳತಕ್ಕದ್ದು. ಈ ಹಣವನ್ನು ಆಸ್ತಿ ತೆರಿಗೆ ಭಾಕಿಯಲ್ಲಿ (Property Tax Arrears) ನಮೂದಿಸಿ ವಸೂಲಿ ಮಾಡಲು ಅವಕಾಶ ನೀಡಲಾಗಿದೆ.

ವಿಭಾಗಗಳ ಕಾರ್ಯಪಾಲಕ ಅಭಿಯಂತರರು ಕಾಲವಿಳಂಬವಿಲ್ಲದೆ ಅನಧಿಕೃತ ಕಟ್ಟಡವನ್ನು / ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಿ, ತೆರವುಗೊಳಿಸಿದ ಮೊತ್ತವನ್ನು ಸೂಕ್ತ ಬಿಲ್ಲುಗಳಿಂದ ಗುತ್ತಿಗೆದಾರರಿಗೆ ಪಾವತಿಸಲು ಜವಾಬ್ದಾರರಾಗಿರುತ್ತಾರೆ. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಿ ಯಾವುದೇ ಲೋಪಕ್ಕೆ ಆಸ್ಪದ ನೀಡದೆ ಕರ್ತವ್ಯ ನಿರ್ವಹಿಸಲು ಆದೇಶಿಸಿದೆ.

ಆಯುಕ್ತರು
ಬೆಂಗಳೂರು ಪೂರ್ವ ನಗರಪಾಲಿಕೆ

ಪ್ರತಿಯನ್ನು:
1) ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3) ವಿಶೇಷ ಆಯುಕ್ತರು (ಯೋಜನೆ)/(ಆಡಳಿತ)/(ಕಂದಾಯ) ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಮಾಹಿತಿಗಾಗಿ ಸಲ್ಲಿಸಿದೆ.
4) ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಮಾಹಿತಿಗಾಗಿ.

5) ಅಪರ ಮುಖ್ಯ ನಗರ ಯೋಜಕರು, ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಜಂಟಿ ಆಯುಕ್ತರುಗಳು, ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ಬೆಂಗಳೂರು ಪೂರ್ವ ನಗರ ಪಾಲಿಕೆ ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಮುಖ್ಯ ಅಭಿಯಂತರರು ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಸೂಕ್ತ ಕ್ರಮಕ್ಕಾಗಿ.
8) ಜಂಟಿ ನಿರ್ದೇಶಕರು-ನಗರ ಯೋಜನೆ ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
9) ಎಲ್ಲಾ ವಿಭಾಗಗಳ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ.
10) ಉಪ ಆಯುಕ್ತರು (ಆಡಳಿತ), ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ.
11) ಉಪ ನಿರ್ದೇಶಕರು, ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ನಗರ ಯೋಜನೆ ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಸೂಕ್ತ ಕ್ರಮಕ್ಕಾಗಿ.
12) ಎಲ್ಲಾ ಉಪ-ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ ಸಂಬಂಧಪಟ್ಟ ವಾರ್ಡ್‌ನ ಅಭಿಯಂತರರು ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಅಗತ್ಯ ನಿರ್ದೇಶನ ನೀಡುವಂತೆ ಸೂಚಿಸಿದೆ.
13) ಎಲ್ಲಾ ಕಂದಾಯಾಧಿಕಾರಿಗಳ ಹಾಗೂ ಸಹಾಯಕ ಕಂದಾಯಾಧಿಕಾರಿಗಳು ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
14) ಕಛೇರಿ ಪ್ರತಿ.

ಅನುಬಂಧ-೨

ಗ್ರೇಟರ್ ಬೆಂಗಳೂರು ಪ್ರಾಧಿಕಾರ

# ಬೆಂಗಳೂರು ಪೂರ್ವ ನಗರ ಪಾಲಿಕೆ

ಆರ್.ಹೆಚ್.ಬಿ ಕಾಲೋನಿ, ಐಟಿಪಿಎಲ್ ಮುಖ್ಯ ರಸ್ತೆ, ಮಹದೇವಪುರ, ಬೆಂಗಳೂರು-560048

ಸಂಖ್ಯೆ: ಬೆಪೂನಪಾ/ಆ/ಟಿಆರ್/161/25-26 ದಿನಾಂಕ:21.11.2025

## ಕಛೇರಿ ಆದೇಶ

**ವಿಷಯ:** ಕಟ್ಟಡ ಮಂಜೂರಾತಿ ನಕ್ಷೆಗಳ ಉಲ್ಲಂಘನೆಗಳನ್ನು, ಮಂಜೂರಾತಿ ನಕ್ಷೆ ಪಡೆಯದೆ ನಿರ್ಮಾಣವಾಗುವ ಅನಧಿಕೃತ ಕಟ್ಟಡಗಳ ನಿರ್ಮಾಣಗಳನ್ನು ತಡೆಯುವ ಹಾಗೂ ತೆರವುಗೊಳಿಸುವ ಸಂಬಂಧ ಕಾರ್ಯಪಡೆ ರಚಿಸುವ ಕುರಿತು.

**ಉಲ್ಲೇಖ:**
1. ಅಧಿಕಾರ ಪ್ರತ್ಯಾಯೋಜನೆ ಕುರಿತು ಆದೇಶ ಸಂಖ್ಯೆ: ಬೆಪೂನಪಾ/ಆ/ಟಿಆರ್/158/25-26 ದಿನಾಂಕ:21.11.2025
2. ಕಟ್ಟಡ ಮಂಜೂರಾತಿ ನಕ್ಷೆಗಳ ಉಲ್ಲಂಘನೆಗಳು ಹಾಗೂ ಅನಧಿಕೃತವಾಗಿ ನಿರ್ಮಾಣವಾಗುವ ಕಟ್ಟಡಗಳನ್ನು ತಡೆಯುವ ಹಾಗೂ ತೆರವುಗೊಳಿಸುವ ಸಂಬಂಧ ಕಾರ್ಯವಿಧಾನ ಕುರಿತು ಕಛೇರಿ ಆದೇಶ ಸಂಖ್ಯೆ: ಬೆಪೂನಪಾ/ಆ/ಟಿಆರ್/162/25-26 ದಿನಾಂಕ:21.11.2025
3. ಆವರ್ತ ನಿಧಿ ಸೃಜಿಸುವ ಕುರಿತು ಈ ಕಛೇರಿ ಆದೇಶ ಸಂಖ್ಯೆ: ಬೆಪೂನಪಾ/ಆ/ಟಿಆರ್/160/25-26 ದಿನಾಂಕ:21.11.2025

**********

ಮೇಲ್ಕಂಡ ವಿಷಯ ಮತ್ತು ಉಲ್ಲೇಖದ ಕಚೇರಿ ಆದೇಶಗಳಲ್ಲಿ ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಂಜೂರಾತಿ ನಕ್ಷೆ ಮತ್ತು ನಿಯಮಗಳನ್ನು ಉಲ್ಲಂಘಿಸಿ ಮತ್ತು ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ವಿರುದ್ಧ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 ರ ಕಲಂ 243 ಹಾಗೂ 244 ರ ಅವಕಾಶಗಳಂತೆ ಕಾನೂನು ಕ್ರಮ ಜರುಗಿಸುವ ಸಂಬಂಧ ವಿವಿಧ ಅಧಿಕಾರಿಗಳಿಗೆ ಜವಾಬ್ದಾರಿ ಮತ್ತು ಅವುಗಳ ನಿರ್ವಹಣೆಯಲ್ಲಿ ವಿಫಲರಾಗುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮದ ಮಾರ್ಗಸೂಚಿಗಳನ್ನು ಉಲ್ಲೇಖ (2)ರ ಆದೇಶದಲ್ಲಿ ವಿವರಿಸಲಾಗಿರುತ್ತದೆ.

ಉಲ್ಲೇಖ (1) ರ ಆದೇಶದಲ್ಲಿ ಮಂಜೂರಾತಿ ನಕ್ಷೆ ವ್ಯತಿರಿಕ್ತವಾಗಿ ನಿರ್ಮಿಸುತ್ತಿರುವ ಕಟ್ಟಡಗಳ ಹಾಗೂ ನಕ್ಷೆ ಮಂಜೂರಾತಿ ಪಡೆಯದೆ ಇರುವ ಅನಧಿಕೃತ ಕಟ್ಟಡಗಳು ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆದ ನಂತರ ನಿರ್ಮಾಣವಾಗುವ ಕಟ್ಟಡಗಳಿಗೆ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 ರ ಕಲಂ 243 (3) (d) ರಂತೆ ತಾತ್ಕಾಲಿಕ ಆದೇಶ ಹಾಗೂ ಕಲಂ 243 (3) (e) ರಂತೆ ಸ್ಥಿರೀಕರಣ ಆದೇಶ ಜಾರಿಮಾಡಲು ಸಂಬಂಧಪಟ್ಟ ವಲಯ ಜಂಟಿ ಆಯುಕ್ತರು ರವರಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶ ಹೊರಡಿಸಲಾಗಿರುತ್ತದೆ.

ಮಂಜೂರಾದ ನಕ್ಷೆಗಳನ್ನು ಉಲ್ಲಂಘಿಸಿ ನಿರ್ಮಿಸುವ ಕಟ್ಟಡಗಳು/ಅನಧಿಕೃತ ನಿರ್ಮಾಣಗಳ ಕುರಿತು ಜಂಟಿ ಆಯುಕ್ತರು ರವರ ಕಛೇರಿಯಲ್ಲಿ ಸ್ವೀಕೃತವಾದ ದೂರುಗಳನ್ನು ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ವರ್ಗಾಯಿಸಿ, ವಾರ್ಡ್‌ನ ಕಿರಿಯ/ಸಹಾಯಕ ಅಭಿಯಂತರರು ದೂರು ಸ್ವೀಕೃತಿಯಾದ 3 ದಿನಗಳೊಳಗಾಗಿ ಕಟ್ಟಡವನ್ನು ಮೇಲ್ನೋಟಕ್ಕೆ ಪರಿಶೀಲಿಸಿ ಉಲ್ಲಂಘನೆಗಳು ಇದ್ದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಉಲ್ಲಂಘನೆಗಳ ಬಗ್ಗೆ ವರದಿ ಸಲ್ಲಿಸಲು ಉಲ್ಲೇಖ (2) ರಲ್ಲಿ ತಿಳಿಸಲಾಗಿದೆ. ಸದರಿ ವರದಿಯ ಆಧಾರದ ಮೇಲೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಟ್ಟಡ ಮಾಲೀಕರ ಉಪಸ್ಥಿತಿಯಲ್ಲಿ ಸ್ಥಳ ಮಹಜರ್ ನಡೆಸುವ ಬಗ್ಗೆ ಹಾಗೂ ಸ್ಥಳ ಮಹಜರ್ ವರದಿಯಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಜಂಟಿ ಆಯುಕ್ತರ ಅನುಮೋದನೆ ಪಡೆದು ಜಿಬಿಜಿ ಕಾಯ್ದೆ 2024 ರ ಕಲಂ 243 (3) (d) ರಡಿಯಲ್ಲಿ ತಾತ್ಕಾಲಿಕ ಆದೇಶ

ಮತ್ತು ನೋಟೀಸ್ ಹಾಗೂ ಕಲಂ 243(3)(e) ರಂತೆ ಸ್ಥಿರೀಕರಣ ಆದೇಶ ಜಾರಿಮಾಡುವ ಮಾರ್ಗಸೂಚಿಗಳನ್ನು ಉಲ್ಲೇಖ (2) ರಂತೆ ಆದೇಶಿಸಲಾಗಿದೆ.

ತದನಂತರ ಪ್ರಕರಣಗಳಿಗೆ ಕಟ್ಟಡ ಮಾಲೀಕರ ಸಮಕ್ಷಮದಲ್ಲಿ ಪ್ರಕರಣದ ವಿಚಾರಣೆಯನ್ನು ನಡೆಸಿ ಉಲ್ಲಂಘನೆಗಳು ಸಾಬಿತು ಆದಲ್ಲಿ ವಿಚಾರಣೆಯ ನಡವಳಿಗಳನ್ನು ದಾಖಲಿಸಿ ಸ್ಥಿರೀಕರಣ ಆದೇಶ ಜಾರಿಗೊಳಿಸುವ ಬಗ್ಗೆ ಹಾಗೂ ಸ್ಥಿರೀಕರಣ ಆದೇಶ ಹೊರಡಿಸಿ, ತದನಂತರ ಕೈಗೊಳ್ಳುವ ಕ್ರಮಗಳ ಬಗ್ಗೆ ಉಲ್ಲೇಖ (2) ರಲ್ಲಿ ವಿವರಿಸಲಾಗಿದೆ. ಮುಂದುವರೆದು ಅಂತಹಾ ಪ್ರಕರಣಗಳಲ್ಲಿ ಕಟ್ಟಡ ಕಾಮಾಗಾರಿಯನ್ನು ಮುಂದುವರೆಯದಂತೆ ಹಾಗೂ ಅನಧಿಕೃತ ಅಂತಸ್ತುಗಳನ್ನು ಬಳಕೆಯಾಗದ ತಡೆಯುವಂತೆ ಸೀಲ್ ಮಾಡಲು ಆದೇಶಿಸಲಾಗಿದೆ.

ತೆರವು ಕಾರ್ಯಚಾರಣೆ ಕಾರ್ಯಗತಗೊಳಿಸುವ ಮುನ್ನ ಸಕ್ಷಮ ಮೇಲ್ಮನವಿ ಪ್ರಾಧಿಕಾರ/ನ್ಯಾಯ ಮಂಡಳಿ ಅಥವಾ ಇನ್ನಾವುದೇ ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ನೀಡದಿರುವ ಬಗ್ಗೆ ಪರಿಶೀಲಿಸಿಕೊಂಡು ಹಾಗೂ ಘನ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಮಾರ್ಗಸೂಚಿಗಳಂತೆ ಕ್ರಮ ಕೈಗೊಳ್ಳಲು ವಿವಿಧ ಶಾಖೆಯ ಅಧಿಕಾರಿಗಳಿಗೆ ಉಲ್ಲೇಖ (2) ರಂತೆ ನಿರ್ದೇಶನಗಳನ್ನು ನೀಡಲಾಗಿದೆ.

ಉಲ್ಲೇಖ (3) ರ ಆದೇಶದಲ್ಲಿ ಕಲಂ 243(3)(e) ರಂತೆ ಸ್ಥಿರೀಕರಣ ಆದೇಶ ನೀಡಿದ ನಂತರ ಕಲಂ 244 (2) ರಂತೆ ಕಟ್ಟಡವನ್ನು ತೆರವುಗೊಳಿಸಲು ಅನುದಾನವನ್ನು ಲಭ್ಯವಾಗುವಂತೆ ರೂ. 25 ಲಕ್ಷ ಅನುದಾನವನ್ನು ಆವರ್ತ ನಿಧಿಯಾಗಿ (Revolving Fund) ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ಒದಗಿಸಿದೆ.

ವಿವಿಧ ರೀತಿಯ ಉಲ್ಲಂಘನೆಗಳನ್ನು ತಡೆಯುವಲ್ಲಿ ಮತ್ತು ಕಟ್ಟಡಗಳನ್ನು ತೆರವುಗೊಳಿಸುವಲ್ಲಿ ಪಾಲಿಕೆಯ ವಿವಿಧ ಶಾಖೆಯ ಅಧಿಕಾರಿಗಳು ಒಳಗೊಂಡಿರುವುದರಿಂದ ಹಾಗೂ ಈ ಹಿಂದೆ ಮುಖ್ಯ ಆಯುಕ್ತರು ಬಿಬಿಎಂಪಿ ರವರಿಂದ ಹಲವಾರು ಸೂಚನೆಗಳನ್ನು ನೀಡಿದ್ದರು ಸಹ ಎಲ್ಲಾ ಅಧಿಕಾರಿಗಳ/ ಶಾಖೆಗಳ ಸಮನ್ವಯತೆ ಇಲ್ಲದೇ ಇದ್ದು ಇಷ್ಟೆಲ್ಲ ಸೂಚನೆಗಳು ಹೊರತಾಗಿ ಅನಧಿಕೃತ/ಉಲ್ಲಂಘಿತ ಕಟ್ಟಡಗಳನ್ನು ಪರಿಣಾಮಕಾರಿಯಾಗಿ ತೆರವುಗೊಳಿಸುವುದು ಸಾಧ್ಯವಾಗುತ್ತಿಲ್ಲ.

ವಿವಿಧ ರೀತಿಯ ಉಲ್ಲಂಘನೆಗಳನ್ನು ತಡೆಯುವಲ್ಲಿ ಮತ್ತು ಕಟ್ಟಡಗಳನ್ನು ತೆರವುಗೊಳಿಸುವಲ್ಲಿ ಪಾಲಿಕೆಯ ವಿವಿಧ ಶಾಖೆಯ ಅಧಿಕಾರಿಗಳ ಜವಾಬ್ದಾರಿಗಳು ಒಳಗೊಂಡಿರುವುದರಿಂದ, ವಿವಿಧ ಶಾಖೆಗಳ ಮಧ್ಯ ಸಮನ್ವಯತೆ ಸಾಧಿಸಿ, ಜಿಬಿಜಿ ಕಾಯ್ದೆ – 2024 ರ ಕಲಂ 243 ರಂತೆ ತಾತ್ಕಾಲಿಕ ಆದೇಶ ಮತ್ತು ಸ್ಥಿರೀಕರಣ ಆದೇಶಗಳನ್ನು ಜಾರಿಗೊಳಿಸಲಾದ ಪ್ರಕರಣಗಳನ್ನು ಸದರಿ ಕಾಯ್ದೆಯ ಕಲಂ 244 ರಡಿಯಲ್ಲಿ ಕ್ರಮ ವಹಿಸಿ ಅನಧಿಕೃತ ಕಟ್ಟಡ/ಕಟ್ಟಡದ ಭಾಗವನ್ನು ತೆರವುಗೊಳಿಸಲು, ಈ ಹಿಂದೆ ಬಿ.ಬಿ.ಎಂ.ಪಿ ಕಾಯ್ದೆ 2020 ಕಲಂ 248 ಹಾಗೂ 356 ಹಾಗೂ ಕೆ.ಎಂ.ಸಿ ಕಾಯ್ದೆ 321 ರ ಅವಕಾಶಗಳಂತೆ ಈಗಾಗಲೇ ತಾತ್ಕಾಲಿಕ ಆದೇಶ, ಸ್ಥಿರೀಕರಣ ಆದೇಶ ಹಾಗೂ ಕಟ್ಟಡ ತೆರವು ಆದೇಶ ಜಾರಿಗೊಳಿಸಿರುವಂತಹ ಪ್ರಕರಣಗಳಲ್ಲಿ ಕಟ್ಟಡಗಳನ್ನು ತೆರವುಗೊಳಿಸಲು ಪರಿಣಾಮಕಾರಿಯಾಗಿ ಕ್ರಮವಹಿಸಬೇಕಾಗಿರುವುದರಿಂದ ವಿವಿಧ ಅಧಿಕಾರಿಗಳನ್ನೊಳಗೊಂಡ ಸಮನ್ವಯ ಸಮಿತಿ ರಚಿಸುವುದು ಅಗತ್ಯವಿರುವುದರಿಂದ ಈ ಕೆಳಕಂಡಂತೆ ಮೇಲ್ವಿಚಾರಣಾ ಹಾಗೂ ಸಮನ್ವಯ ಸಮಿತಿ ರಚಿಸಿ ಆದೇಶ ಹೊರಡಿಸಿದೆ.

**1) ಅನಧಿಕೃತ/ಉಲ್ಲಂಘಿತ ಕಟ್ಟಡಗಳ ಪ್ರಕರಣಗಳ ಮೇಲ್ವಿಚಾರಣಾ ಹಾಗೂ ಸಮನ್ವಯ ಸಮಿತಿ (Monitoring and co-ordination committee for unauthorized buildings & building deviations)**

**ಕೋಷ್ಟಕ-1, ಮೇಲ್ವಿಚಾರಣಾ ಹಾಗೂ ಸಮನ್ವಯ ಸಮಿತಿ:**

| ಕ್ರಸಂ | ಸದಸ್ಯರು | ಪದನಾಮ |
|---|---|---|
| 1 | ಅಧ್ಯಕ್ಷರು | ಆಯುಕ್ತರು, ಬೆಂಗಳೂರು ಪೂರ್ವ ನಗರ ಪಾಲಿಕೆ |
| 2 | ಸದಸ್ಯರು | ಅಪರ ಮುಖ್ಯ ನಗರ ಯೋಜಕರು. |
| 3 | ಸಮಿತಿ ಸಂಚಾಲಕರು | ಜಂಟಿ ಆಯುಕ್ತರು, (ಜೋನ್-1, ಜೋನ್-2) |
| 4 | ಸದಸ್ಯರು | ಜಂಟಿ ನಿರ್ದೇಶಕರು (ನಗರ ಯೋಜನೆ) |
| 5 | ಸದಸ್ಯರು | ಉಪ ನಿರ್ದೇಶಕರು, (ನಗರ ಯೋಜನೆ) ಅವರವರ ವ್ಯಾಪ್ತಿಗೆ |
| 6 | ಸದಸ್ಯರು | ವಿಭಾಗಗಳ ಕಾರ್ಯಪಾಲಕ ಅಭಿಯಂತರರುಗಳು. ಅವರವರ ವ್ಯಾಪ್ತಿಗೆ |
| 7 | ಸದಸ್ಯರು | ಕಾನೂನು ಕೋಶದ ಮುಖ್ಯಸ್ಥರು |
| 8 | ಸದಸ್ಯರು | ಕಂದಾಯ ಅಧಿಕಾರಿ |

**ii. ಅನಧಿಕೃತ/ಉಲ್ಲಂಘಿತ ಕಟ್ಟಡಗಳ ಪ್ರಕರಣಗಳ ಮೇಲ್ವಿಚಾರಣಾ ಹಾಗೂ ಸಮನ್ವಯ ಸಮಿತಿಯು ಈ ಕೆಳಕಂಡಂತೆ ಕಾರ್ಯನಿರ್ವಹಿಸುವುದು.**

1) ಸಮಿತಿಯು ಪ್ರತಿ 2 ತಿಂಗಳಿಗೊಮ್ಮೆ ಸಭೆಯನ್ನು ಕಡ್ಡಾಯವಾಗಿ ನಡೆಸುವುದು.
2) ಅನಧಿಕೃತ ಹಾಗೂ ಅನುಮೋದಿತ ನಕ್ಷೆ ಉಲ್ಲಂಘನೆ ಮಾಡಿ ನಿರ್ಮಾಣವಾಗುವ ಕಟ್ಟಡಗಳ ಬಗ್ಗೆ ಸಾರ್ವಜನಿಕರಿಂದ ಸ್ವೀಕರಿಸಿರುವ ದೂರುಗಳನ್ನು/ದೂರುಗಳ ವಹಿಯನ್ನು ಪರಿಶೀಲಿಸಿಕೊಳ್ಳುವುದು. ಕಟ್ಟಡ ನಕ್ಷೆ ಅನುಮೋದನೆ ಪಡೆದು ನಿರ್ಮಾಣವಾಗುತ್ತಿರುವ ನೂತನ ಕಟ್ಟಡಗಳ ಸ್ಥಳ ಪರಿಶೀಲನೆ ವರದಿಯನ್ನು ಪರಿಶೀಲಿಸಿಕೊಳ್ಳುವುದು. ಜಿಬಿಜಿ ಕಾಯ್ದೆ 2024 ರ ಕಲಂ 243 ಹಾಗೂ 244 ರಂತೆ ಕ್ರಮವಹಿಸಿರುವ ಪ್ರಕರಣಗಳ ವಹಿಯನ್ನು ಪರಿಶೀಲಿಸುವುದು.
3) ಜಿಬಿಜಿ ಕಾಯ್ದೆ 2024 ರ ಕಲಂ 243 ರಲ್ಲಿ ಪೂರ್ಣಗೊಂಡಿರುವ ಪ್ರಕರಣಗಳನ್ನು ಪರಿಶೀಲಿಸಿ, ಸದರಿ ಕಾಯ್ದೆಯ ಕಲಂ 244 ರಲ್ಲಿ ಆದೇಶ ಜಾರಿಗೊಳಿಸುವ ಬಗ್ಗೆ ಚರ್ಚಿಸಿ ಜಾರಿಗೊಳ್ಳದಿದ್ದಲ್ಲಿ ಜಾರಿಗೊಳಿಸುವ ಬಗ್ಗೆ ಚರ್ಚಿಸಿ ಆದೇಶವನ್ನು ಜಾರಿಗೊಳಿಸಲು ಸಂಬಂಧಪಟ್ಟವರಿಗೆ ಸೂಚಿಸುವುದು.
4) ನಕ್ಷೆ ಉಲ್ಲಂಘನೆ ಮಾಡಿ & ಅನಧಿಕೃತವಾಗಿ ನಿರ್ಮಾಣ ಮಾಡಿರುವ ಭಾಗಗಳನ್ನು ತೆರವುಗೊಳಿಸಲು ಅಂತಿಮ ಮಾಡಲಾಗಿರುವ ಪ್ರಕರಣಗಳನ್ನು ತೆರವುಗೊಳಿಸುವ ಹಾಗೂ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರುಗಳು ಅಂದಾಜುಪಟ್ಟಿ ತಯಾರಿಸಿ ಅಧಿಕಾರ ಪ್ರತ್ಯಾಯೋಜನೆ ಆದೇಶದಂತೆ ಅಂದಾಜು ಪಟ್ಟಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ನೀಡುವ ದೃಷ್ಟಿಯಲ್ಲಿ, ಅನುಮೋದನೆಗೆ ಬಾಕಿಯಿರುವ ಪ್ರಕರಣಗಳನ್ನು ಚರ್ಚಿಸಿ ಅಂದಾಜು ಪಟ್ಟಿ ಮಂಜೂರು ಮಾಡುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡುವುದು.
5) ಮೇಲ್ಮನವಿ ಪ್ರಾಧಿಕಾರ, ನ್ಯಾಯಮಂಡಳಿ ಮತ್ತು ವಿವಿಧ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವ ಪ್ರಕರಣಗಳ ಸ್ಥಿತಿಗತಿಗಳನ್ನು ಪರಿಶೀಲಿಸಿಕೊಳ್ಳುವುದು. ಒಂದು ವೇಳೆ, ನ್ಯಾಯಾಲಯದಲ್ಲಿ ಅಥವಾ ನ್ಯಾಯಮಂಡಳಿಯಲ್ಲಿ ಅಥವಾ ಮೇಲ್ಮನವಿ ಪ್ರಾಧಿಕಾರದಲ್ಲಿ ತಡೆಯಾಜ್ಞೆ ಇದ್ದಲ್ಲಿ ಅಂತಹ ಪ್ರಕರಣಗಳಲ್ಲಿ ತಡೆಯಾಜ್ಞೆಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ನಿರ್ದೇಶಕರು (ನಗರ ಯೋಜನೆ), ಜಂಟಿ ನಿರ್ದೇಶಕರು (ನಗರ ಯೋಜನೆ) ಮತ್ತು ಕಾನೂನು ಕೋಶದ ಅಧಿಕಾರಿಗಳು ಅಗತ್ಯ ಸಮನ್ವಯದೊಂದಿಗೆ ಅಗತ್ಯ ಕ್ರಮ ವಹಿಸುವಂತೆ ಸೂಚನೆ ನೀಡುವುದು ಮತ್ತು ಈ ಬಗ್ಗೆ ಪ್ರಗತಿ ಪರಿಶೀಲಿಸುವುದು.
6) ಅನಧಿಕೃತ ಕಟ್ಟಡವನ್ನು / ಕಟ್ಟಡದ ಉಲ್ಲಂಘನೆ ಭಾಗವನ್ನು ಜಿಬಿಜಿ ಕಾಯ್ದೆ 2024 ರ ಕಲಂ 243 ಹಾಗೂ 244 ರಡಿಯಲ್ಲಿ ತೆರವುಗೊಳಿಸಲು ವೆಚ್ಚವಾಗುವ ಮೊತ್ತದ ಅಂದಾಜು ಪಟ್ಟಿಯಂತೆ

ಕಾರ್ಯಪಾಲಕ ಅಭಿಯಂತರರುಗಳು ಆಯಾ ವಲಯದಲ್ಲಿ ನಿಯೋಜಿಸಲ್ಪಟ್ಟ ಪಾಲಿಕೆ ಗುತ್ತಿಗೆದಾರರಿಗೆ ಅನಧಿಕೃತ ಕಟ್ಟಡ/ಕಟ್ಟಡದ ಉಲ್ಲಂಘನೆ ಭಾಗವನ್ನು ತೆರವುಗೊಳಿಸಲು ಆದೇಶ ನೀಡಲು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರುಗಳಿಗೆ ಕ್ರಮ ಕೈಗೊಂಡಿರುವ ಬಗ್ಗೆ ಪರಿಶೀಲಿಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡುವುದು.

7) ಮೇಲ್ಮನವಿ ಪ್ರಾಧಿಕಾರದಲ್ಲಿ ಮತ್ತು ಘನ ನ್ಯಾಯಾಲಯಗಳಲ್ಲಿ ಬಾಕಿಯಿಲ್ಲದಿರುವ ಅನಧಿಕೃತ ಕಟ್ಟಡದ ಭಾಗಗಳನ್ನು ತೆರವುಗೊಳಿಸುವ ಕ್ರಮಗಳ ಬಗ್ಗೆ ಪ್ರಗತಿ ಪರಿಶೀಲನೆ ನಡೆಸುವುದು ಹಾಗೂ ಅಗತ್ಯ ಸೂಚನೆ ನೀಡುವುದು.

8) ಕಟ್ಟಡದ ಅನಧಿಕೃತ ಭಾಗಗಳನ್ನು ತೆರವುಗೊಳಿಸುವ ಸಂಬಂಧ ಕಟ್ಟಡ ಅನುಷ್ಠಾನಾ ಕಾರ್ಯಪಡೆಗೆ ಅಗತ್ಯ ಸೂಚನೆಗಳನ್ನು ನೀಡುವುದು ಹಾಗೂ ತೆರವು ಕಾರ್ಯಚರಣೆಯ ಪ್ರಗತಿಯನ್ನು ಪರಿಶೀಲಿಸುವುದು.

9) ಅನಧಿಕೃತ ಕಟ್ಟಡವನ್ನು/ ಕಟ್ಟಡದ ಉಲ್ಲಂಘನೆ ಭಾಗಗಳನ್ನು ತೆರವುಗೊಳಿಸಿದ ನಂತರ ಉಲ್ಲೇಖ (3)ರ ಕಛೇರಿ ಆದೇಶದನ್ವಯ ಗುತ್ತಿಗೆದಾರರಿಗೆ ಬಿಲ್ ಪಾವತಿಸಲು ತದನಂತರ ಈ ವೆಚ್ಚವನ್ನು ಆಸ್ತಿ ತೆರಿಗೆ ಬಾಕಿಯಾಗಿ ವಸೂಲಿ ಮಾಡಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳುವುದರ ಬಗ್ಗೆ ನಿರ್ದೇಶನ ನೀಡುವುದು ಹಾಗೂ ಪ್ರಗತಿ ಪರಿಶೀಲಿಸುವುದು.

ಉಲ್ಲೇಖ (2) ರ ಆದೇಶದಲ್ಲಿ ವಹಿಸಲಾಗಿರುವ ಕರ್ತವ್ಯಗಳು/ಜವಾಬ್ದಾರಿಗಳನ್ನು ನಿರ್ವಹಿಸಲು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮೇಲ್ವಿಚಾರಣಾ ಹಾಗೂ ಸಮನ್ವಯ ಸಮಿತಿಯ ಎಲ್ಲಾ ಅಧಿಕಾರಿಗಳು/ಸದಸ್ಯರು ಅನಧಿಕೃತ/ಉಲ್ಲಂಘಿತ ಕಟ್ಟಡಗಳ ಪ್ರಕರಣಗಳ ಸಭೆಗಳಲ್ಲಿ ಕಡ್ಡಾಯವಾಗಿ ಹಾಜರಾಗತಕ್ಕದ್ದು ಹಾಗೂ ವಿವಿಧ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಿರುವ ಆದೇಶದನ್ವಯ ಅನುಬಂಧ-3 ರಲ್ಲಿ ತೋರಿಸಲಾಗಿರುವ ಕಾಲಮಿತಿಯಲ್ಲಿ ಕಡ್ಡಾಯವಾಗಿ ಕ್ರಮ ವಹಿಸಲು ಸೂಚಿಸಿದೆ. ಅಧಿಕಾರಿಗಳು ಪ್ರತ್ಯಾಯೋಜಿಸಿರುವ ಆದೇಶದನ್ವಯ ಕ್ರಮ ಕೈಗೊಳ್ಳದ ಪಕ್ಷದಲ್ಲಿ ಅದನ್ನು ಕರ್ತವ್ಯಲೋಪವೆಂದು ಅನಧಿಕೃತ / ಉಲ್ಲಂಘನೆ ನಿರ್ಮಾಣ ತಡೆಯಲು ವಿಫಲತೆಯೆಂದು ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಜಿಬಿಜಿ ಕಾಯ್ದೆ-2024ರ ಕಲಂ 247 ಮತ್ತು ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿ ಶಿಸ್ತು ಕ್ರಮ ಜರುಗಿಸಲಾಗುವುದು.

**2) ಅನುಷ್ಠಾನ ಕಾರ್ಯಪಡೆ (Enforcement Task Force):**

ಅನಧಿಕೃತ ಕಟ್ಟಡಗಳು ಹಾಗೂ ನಕ್ಷೆ ಉಲ್ಲಂಘನೆ ಪ್ರಕರಣಗಳಲ್ಲಿ ಉಲ್ಲೇಖ (2) ರಂತೆ ಹೊರಡಿಸಲಾದ ಮಾರ್ಗಸೂಚಿ, ಉಲ್ಲೇಖ (1) ರಲ್ಲಿ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ಹಾಗೂ ಉಲ್ಲೇಖ (3) ರಲ್ಲಿ ಸದರಿ ಕಾರ್ಯಕ್ಕೆ ಒದಗಿಸಲಾದ ಆವರ್ತ ನಿಧಿಯ ಆದೇಶಗಳ ಹೊರತಾಗಿಯೂ ಸದರಿ ಕಟ್ಟಡಗಳನ್ನು ತೆರವುಗೊಳಿಸಬೇಕಾದ ಕಾರ್ಯಚರಣೆ ನಿರ್ವಹಿಸುವ ಸಂದರ್ಭದಲ್ಲಿ ಈ ಕಾರ್ಯವನ್ನು ಕೇವಲ ಒಬ್ಬ ಅಧಿಕಾರಿಗೆ ಪ್ರತ್ಯಾಯೋಜಿಸಿರುವ ಸಂದರ್ಭದಲ್ಲಿ ಈ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಈ ಕೆಳಕಂಡ ಕಾರಣಗಳಿಂದ ತಡೆ ಉಂಟಾಗಬಹುದಾಗಿರುತ್ತದೆ.

1) ಪಾಲಿಕೆಯ ವಿವಿಧ ಶಾಖೆಗಳಿಂದ ಅಗತ್ಯ ಸಹಕಾರ ಮತ್ತು ಸಮನ್ವಯದ ಕೊರತೆ
2) ಕಾರ್ಯಚರಣೆ ವಿಷಯದಲ್ಲಿ ವಿವಿಧ ಶಾಖೆಗಳಿಂದ ನಿರ್ದಿಷ್ಟವಾಗಿ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಸಮರ್ಪಕವಾಗಿ ಕೈಗೊಳ್ಳದಿರುವುದು
3) ಕೇವಲ ಒಬ್ಬ ಅಧಿಕಾರಿಗೆ ಕಟ್ಟಡ ತೆರವುಗೊಳಿಸುವ ಆದೇಶವನ್ನು ಚಾಲನೆ ಮಾಡಲು ಆದೇಶಿಸುವ ಸಂದರ್ಭದಲ್ಲಿ ಆತನ ಮೇಲೆ ಬೀಳುವ ಅನಗತ್ಯ ಒತ್ತಡಗಳು.
4) ವಿವಿಧ ಶಾಖೆಗಳಿಂದ ಕೈಗೊಳ್ಳಬೇಕಾದಾಗ ಕ್ರಮಗಳಲ್ಲಿ ಉಂಟಾಗಬಹುದಾದ ಲೋಪಗಳು

5) ಕೆಲವು ಇಲಾಖೆಗಳು ನಿರ್ವಹಿಸಬೇಕಾದ ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳುವುದು

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ತೆರವು ಕಾರ್ಯಚರಣೆ ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ನಿಯಮ ಮತ್ತು ಆದೇಶಗಳ ಅನುಸಾರ ನಿರ್ವಹಣೆ ಮಾಡಲು ಇದಕ್ಕೆ ಸಂಬಂಧಪಟ್ಟ ಎಲ್ಲಾ ಶಾಖೆಯ ಅಧಿಕಾರಿಗಳು ಒಳಗೊಂಡ ತಂಡವನ್ನು ರಚಿಸುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಈ ಹಿನ್ನಲೆಯಲ್ಲಿ ಕೆಳಕಂಡಂತೆ ಅನುಷ್ಠಾನ ಕಾರ್ಯಪಡೆ ರಚಿಸಿ ಆದೇಶಿಸಿದೆ.

**ಕೋಷ್ಟಕ–2 ಅನುಷ್ಠಾನ ಕಾರ್ಯಪಡೆ :**

| ಕ್ರ.ಸಂ | ಸದಸ್ಯರು | ಪದನಾಮ |
|---|---|---|
| 1 | ಅಧ್ಯಕ್ಷರು | ಜಂಟಿ ಆಯುಕ್ತರು, (ಜೋನ್–I, ಜೋನ್–2) |
| 2 | ಸದಸ್ಯರು | ಜಂಟಿ ನಿರ್ದೇಶಕರು (ನಗರ ಯೋಜನೆ) ಕೇಂದ್ರ ಕಛೇರಿಯ ಪ್ರಕರಣಗಳಿಗೆ ಸಂಬಂಧಪಟ್ಟಂತೆ. |
| 3 | ಸದಸ್ಯರು | ಉಪ ನಿರ್ದೇಶಕರು, (ನಗರ ಯೋಜನೆ) ವಲಯ ಕಛೇರಿಯ ಪ್ರಕರಣಗಳಿಗೆ ಸಂಬಂಧಪಟ್ಟಂತೆ. |
| 4 | ಸದಸ್ಯರು | ಸಂಬಂಧಪಟ್ಟ ವಿಭಾಗಗಳ ಕಾರ್ಯಪಾಲಕ ಅಭಿಯಂತರರುಗಳು. |
| 5 | ಕಾರ್ಯಪಡೆಯ ಸಂಚಾಲಕರು | ಸಂಬಂಧಪಟ್ಟ ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು |
| 6 | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ |
| 7 | ಸದಸ್ಯರು | ಸಂಬಂಧಪಟ್ಟ ಉಪ ಪೋಲೀಸ್ ವರಿಷ್ಠ ಅಧಿಕಾರಿ, ಬಿಎಂಟಿಎಫ್. |

**ii. ಕಾರ್ಯಪಡೆಯ ಕಾರ್ಯವಿಧಾನ ಈ ಕೆಳಕಂಡಂತಿರುತ್ತದೆ :**

1. ಜಿಬಿಜಿ ಕಾಯ್ದೆ 2024 ಕಲಂ 244 (2) ರಡಿಯಲ್ಲಿ ಹೊರಡಿಸಲಾಗಿರುವ ತೆರವು ಕಾರ್ಯಚರಣೆ ಆದೇಶಗಳನ್ನು ಕಾರ್ಯಗತಗೊಳಿಸುವ ಸಂದರ್ಭದಲ್ಲಿ ಮೇಲ್ಮನವಿ ಪ್ರಾಧಿಕಾರ/ನ್ಯಾಯ ಮಂಡಳಿ ಅಥವಾ ಇನ್ನಾವುದೇ ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ನೀಡದಿರುವ ಬಗ್ಗೆ ಪರಿಶೀಲಿಸಿಕೊಂಡು ನಂತರ ಸ್ಥಿರೀಕರಣ ಆದೇಶದಂತೆ ಕಟ್ಟಡವನ್ನು/ವ್ಯತಿರಿಕ್ತ ಭಾಗವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು.
2. ಘನ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ: 14604/2024, ಎಸ್.ಎಲ್.ಪಿ(ಸಿ) ಸಂಖ್ಯೆ: 36440/2014 ರಲ್ಲಿ ನೀಡಿರುವ ಆದೇಶ ದಿನಾಂಕ:17.12.2024 ರಂದು ಹಾಗೂ ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 295/2022, ರಲ್ಲಿ ನೀಡಿರುವ ಆದೇಶ ದಿನಾಂಕ:13.11.2024 ಮತ್ತು ಇನ್ನಿತರೆ ಸಂಬಂಧಿಸಿದ ಅರ್ಜಿಯಲ್ಲಿ ಅನಧಿಕೃತ/ಉಲ್ಲಂಘನೆಗಳನ್ನು ಒಳಗೊಂಡ ನಿರ್ಮಾಣಗಳ ವಿರುದ್ಧ ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಪಾಲಿಸಬೇಕಾದ ಕೆಲವು ಅಗತ್ಯ ಕ್ರಮಗಳ ಬಗ್ಗೆ ವಿವರಿಸಿ ಆದೇಶ ಹೊರಡಿಸಿದ್ದು ತೆರವು ಕಾರ್ಯಚರಣೆ ಕಾರ್ಯಗತಗೊಳಿಸುವ ಸಂದರ್ಭದಲ್ಲಿ ಕ್ರಮಗಳನ್ನು ಅನುಸರಿಸತಕ್ಕದ್ದು.
3. ಕಟ್ಟಡದ ಉಲ್ಲಂಘನೆ ಭಾಗಗಳನ್ನು ತೆರವುಗೊಳಿಸಲು ನಿಗದಿಪಡಿಸಿರುವ ದಿನಾಂಕದೊಳಗೆ ನಗರ ಯೋಜನೆ ಶಾಖೆಯ ಸಹಾಯಕ ನಿರ್ದೇಶಕರು/ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಟ್ಟಡದ ಅನಧಿಕೃತ ನಿರ್ಮಾಣದ ಭಾಗಗಳನ್ನು ಸ್ಥಳದಲ್ಲಿ ಗುರುತಿಸುವುದು ಹಾಗೂ ಘನ ಸರ್ವೋಚ್ಚ ನ್ಯಾಯಾಲದ ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 295/2022, ರ ಆದೇಶದ 91D(iii) ರಲ್ಲಿ ತಿಳಿಸಿರುವಂತೆ ಕಟ್ಟಡವನ್ನು ತೆರವುಗೊಳಿಸುವ ಮುನ್ನ ಇಬ್ಬರು ಪಂಚರ ಸಹಿ ಪಡೆದು ಸ್ಥಳ ಮಹಜರ್ ಸಿದ್ಧಪಡಿಸಿಕೊಳ್ಳುವುದು.

4. ಕಟ್ಟಡದ ಉಲ್ಲಂಘನೆ ಭಾಗಗಳನ್ನು ತೆರವುಗೊಳಿಸುವ ಮುನ್ನ ಕಟ್ಟಡಕ್ಕೆ ಒದಗಿಸಲಾದ ವಿದ್ಯುತ್ ಹಾಗೂ ನೀರಿನ ಸಂಪರ್ಕವನ್ನು ಸ್ಥಗಿತ/ಕಡಿತಗೊಳಿಸಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು.
5. ಘನ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 295/2022, ರ ಆದೇಶದ 91E(i) & (ii) ರಲ್ಲಿ ತೆರವು ಕಾರ್ಯಚರಣೆಯನ್ನು ವಿಡಿಯೋ ರೆಕಾರ್ಡಿಂಗ್ ಮಾಡುವುದು. ಸದರಿ ವಿಡಿಯೋ ರೆಕಾರ್ಡಿಂಗ್ ಮತ್ತು ಕಟ್ಟಡ ತೆರವು ಕಾರ್ಯಚರಣೆ ವರದಿಯನ್ನು ಜಂಟಿ ಆಯುಕ್ತರಿಗೆ ಸಲ್ಲಿಸುವುದು. ಜಂಟಿ ಆಯುಕ್ತರು/ಜಂಟಿ ನಿರ್ದೇಶಕರು ಅದನ್ನು ಕಟ್ಟಡ ಪರವಾನಗಿ ನೀಡಲಾಗುತ್ತಿರುವ ಇ.ಓ.ಡಿ.ಬಿ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲು ಕ್ರಮ ವಹಿಸುವುದು.
6. ಘನ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 295/2022, ರ ಆದೇಶದ 91E ರಂತೆ ತೆರವು ಕಾರ್ಯಚರಣೆ ವರದಿಯಲ್ಲಿ ನಿಯೋಜಿಸಲ್ಪಟ್ಟ ಪಾಲಿಕೆಯ ಅಧಿಕಾರಿಗಳು/ಪೋಲೀಸ್ ಅಧಿಕಾರಿಗಳು/ಬಿಎಂಟಿಎಫ್ ಅಧಿಕಾರಿಗಳು, ಕಂದಾಯ ಅಧಿಕಾರಿಗಳ ಹೆಸರು ಮತ್ತು ವಿವರವನ್ನು ವರದಿಯಲ್ಲಿ ನಮೂದಿಸುವುದು.
7. ಅನಧಿಕೃತ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ಕಟ್ಟಡದಲ್ಲಿ ವಾಸಿಸುವ ನಿವಾಸಿಗಳಿಗೆ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು 15 ದಿನಗಳ ಪೂರ್ವ ಸೂಚನೆ ನೀಡಲು ಸ್ಥಳಿಯ ಪೋಲಿಸ್ ಠಾಣೆ ಹಾಗೂ ಸಂಬಂಧಪಟ್ಟ ಉಪ ಪೋಲೀಸ್ ವರಿಷ್ಠ ಅಧಿಕಾರಿ, ಬಿಎಂಟಿಎಫ್. ರವರಿಗೆ ಅಗತ್ಯ ಭದ್ರತೆ ನೀಡಿ ತೆರವು ಕಾರ್ಯಚರಣೆ ಕಾರ್ಯಗತಗೊಳಿಸುವಲ್ಲಿ ಸಹಕಾರ ನೀಡಲು ಮನವಿ ಸಲ್ಲಿಸುವುದು.
8. ಅನಧಿಕೃತ ಕಟ್ಟಡವನ್ನು/ಕಟ್ಟಡದ ಉಲ್ಲಂಘನೆ ಭಾಗಗಳನ್ನು ತೆರವುಗೊಳಿಸಿದ ನಂತರ ಉಲ್ಲೇಖ (3) ರ ಕಛೇರಿ ಆದೇಶದನ್ವಯ ಗುತ್ತಿಗೆದಾರರಿಗೆ ಬಿಲ್ ಪಾವತಿಸಲು ತದನಂತರ ಈ ವೆಚ್ಚವನ್ನು ಆಸ್ತಿ ತೆರಿಗೆ ಬಾಕಿಯಾಗಿ ವಸೂಲಿ ಮಾಡಲು ಸಂಬಂಧಪಟ್ಟ ವಿಭಾಗದ ಕಂದಾಯ ಅಧಿಕಾರಿಗೆ ತಿಳಿಸುವುದು.
9. ಕಟ್ಟಡದ ಉಲ್ಲಂಘನೆ ಭಾಗಗಳನ್ನು ಹಾಗೂ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾರ್ಯವನ್ನು ನಿಗಧಿತ ಅವಧಿಯಲ್ಲಿ ನಿರ್ವಹಿಸಿ ಪೂರ್ಣಗೊಳಿಸುವುದು ಹಾಗೂ ಈ ಬಗ್ಗೆ ಪ್ರಗತಿ ವರದಿಯನ್ನು ಅನಧಿಕೃತ/ಉಲ್ಲಂಘಿತ ಕಟ್ಟಡಗಳ ಪ್ರಕರಣಗಳ ಮೇಲ್ವಿಚಾರಣಾ ಹಾಗೂ ಸಮನ್ವಯ ಸಮಿತಿಗೆ ಸಲ್ಲಿಸುವುದು.
10. ಅನಧಿಕೃತ/ಉಲ್ಲಂಘಿತ ಕಟ್ಟಡಗಳ ಪ್ರಕರಣಗಳ ಮೇಲ್ವಿಚಾರಣಾ ಹಾಗೂ ಸಮನ್ವಯ ಸಮಿತಿಯು ಕಾಲಾಕಾಲಕ್ಕೆ ನೀಡುವ ನಿರ್ದೇಶನಗಳು/ಸೂಚನೆಗಳನ್ನು ಕಾರ್ಯಗತಗೊಳಿಸುವುದು.

ವಿವಿಧ ಅಧಿಕಾರಿಗಳು ಅವರುಗಳ ಜವಾಬ್ದಾರಿಯನ್ನು ನಿರ್ವಹಿಸಬೇಕಾದ ಕರ್ತವ್ಯವನ್ನು Flow Chart ಮೂಲಕ ಅನುಬಂಧ-1 ಹಾಗೂ 2 ರಲ್ಲಿ & ಕಾಲಮಿತಿಯನ್ನು ಅನುಬಂಧ-3 ರಲ್ಲಿ ವಿವರಿಸಿ ಲಗತ್ತಿಸಿದೆ. ಸದರಿ ಅನುಬಂಧ- 3 ರಲ್ಲಿ ವಿವರಿಸಿರುವ ಕಾಲಮಿತಿಯಂತೆ ಕಟ್ಟಡ ಉಲ್ಲಂಘನೆ/ಅನಧಿಕೃತ ಕಟ್ಟಡಗಳ ವಿರುದ್ಧ ಕಾರ್ಯಚರಣೆ ಕಾರ್ಯಗತಗೊಳಿಸುವುದು.

ಕೋಷ್ಟಕ-2ರಲ್ಲಿನ ಮೇಲಿನಂತೆ ಅನುಷ್ಠಾನ ಕಾರ್ಯಪಡೆಯ ವಿವಿಧ ಅಧಿಕಾರಿಗಳು ಕಟ್ಟಡ ತೆರವುಗೊಳಿಸುವ ಕಾರ್ಯಚರಣೆ ಸಂದರ್ಭದಲ್ಲಿ ಕಾರ್ಯಪಡೆಯ ಅಧ್ಯಕ್ಷರ ಪೂರ್ವ ಅನುಮತಿ ಇಲ್ಲದೇ ಗೈರು ಹಾಜರಾಗತಕ್ಕದಲ್ಲ. ಒಂದು ವೇಳೆ ಪೂರ್ವ ಅನುಮತಿ ಇಲ್ಲದೇ ಗೈರು ಹಾಜರಾಗಿದ್ದಲ್ಲಿ ಅದನ್ನು ತೆರವುಗೊಳಿಸುವಲ್ಲಿ ಸದರಿ ಅಧಿಕಾರಿಯ ವಿಫಲತೆಯೆಂದು ಮತ್ತು ಕರ್ತವ್ಯ ಲೋಪವೆಂದು ಪರಿಗಣಿಸಿ

ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಜಿಬಿಜಿ ಕಾಯ್ದೆ-2024ರ ಕಲಂ 247 ಮತ್ತು ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿ ಶಿಸ್ತು ಕ್ರಮ ಜರುಗಿಸಲಾಗುವುದು.

ಈ ಮೇಲ್ಕಂಡ ಆದೇಶವನ್ನು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಅರ್ಥೈಸಿಕೊಂಡು, ಅನಧಿಕೃತ ಕಟ್ಟಡ/ಉಲ್ಲಂಘನೆ ನಿರ್ಮಾಣಗಳನ್ನು ತಡೆಯಲು ಮತ್ತು ತೆರವುಗೊಳಿಸುವ ದೃಷ್ಟಿಯಿಂದ ಅವರವರ ಜವಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಆದೇಶಿಸಿದೆ.

ಆಯುಕ್ತರು
ಬೆಂಗಳೂರು ಪೂರ್ವ ನಗರ ಪಾಲಿಕೆ

**ಅಡಕ:**

1. W.P.No: 6184/2015 ರ ಆದೇಶ ದಿನಾಂಕ: 10.03.2015
2. W.P.No: 20056/2019 ರ ಆದೇಶ ದಿನಾಂಕ: 12.02.2024
3. W.P.(Civil No: 295/2022 ರ ಆದೇಶ ದಿನಾಂಕ: 13.11.2024
4. Civil Appeal No: 14604/2024, SLP(C) No:36440/2014 ರ ಆದೇಶ ದಿನಾಂಕ: 17.12.2024
5. ಮಾದರಿ ನೋಟೀಸ್ ಪ್ರತಿ.

**ಪ್ರತಿಯನ್ನು:**

1) ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ಮಾನ್ಯ ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3) ವಿಶೇಷ ಆಯುಕ್ತರು (ಯೋಜನೆ)/(ಆಡಳಿತ)/(ಕಂದಾಯ) ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಮಾಹಿತಿಗಾಗಿ ಸಲ್ಲಿಸಿದೆ.
4) ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಮಾಹಿತಿಗಾಗಿ.
5) ಅಪರ ಮುಖ್ಯ ನಗರ ಯೋಜಕರು, ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಜಂಟಿ ಆಯುಕ್ತರುಗಳು, ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ಬೆಂಗಳೂರು ಪೂರ್ವ ನಗರ ಪಾಲಿಕೆ ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಮುಖ್ಯ ಅಭಿಯಂತರರು ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಸೂಕ್ತ ಕ್ರಮಕ್ಕಾಗಿ.
8) ಜಂಟಿ ನಿರ್ದೇಶಕರು-ನಗರ ಯೋಜನೆ ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
9) ಎಲ್ಲಾ ವಿಭಾಗಗಳ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ.
10) ಉಪ ಆಯುಕ್ತರು (ಆಡಳಿತ), ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಮಾಹಿತಿಗಾಗಿ.
11) ಉಪ ನಿರ್ದೇಶಕರು, ವಲಯ-1 ಮಹದೇವಪುರ & ವಲಯ-2 ಕೆ.ಆರ್ ಪುರಂ, ನಗರ ಯೋಜನೆ ಬೆಂಗಳೂರು ಪೂರ್ವ ನಗರ ಪಾಲಿಕೆ ರವರ ಸೂಕ್ತ ಕ್ರಮಕ್ಕಾಗಿ.
12) ಎಲ್ಲಾ ಉಪ-ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ ಸಂಬಂಧಪಟ್ಟ ವಾರ್ಡ್‌ನ ಅಭಿಯಂತರರು ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಅಗತ್ಯ ನಿರ್ದೇಶನ ನೀಡುವಂತೆ ಸೂಚಿಸಿದೆ.